بِسْمِ اللّٰہِ الرَّحْمٰنِ الرَّحِیْمِ    نَحْمَدُہٗ وَنُصَلِّی عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 30

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

29 ಜುಲೈ 2021, 29 ವಫಾ 1400 ತಬ್‌ಲೀಗ್ ಹಿಜರಿ ಶಮ್‌ಸಿ, 18 ಝುಲ್ ಹಜ್ಜ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

وَلَوْ اَنَّ اَهْلَ الْكِتٰبِ
اٰمَنُوْا وَاتَّقَوْا لَكَفَّرْنَا عَنْهُمْ
سَيِّاٰتِهِمْ وَلَاَدْخَلْنٰهُمْ جَنّٰتِ النَّعِيْمِ

(ಅಲ್‌ಮಾಇದ: 66)

ಅಂದರೆ: ಗ್ರಂಥದವರು ವಿಶ್ವಾಸ ಹೊಂದಿ ಭಯ ಭಕ್ತಿಯನ್ನು ತೋರಿಸಿದ್ದರೆ, ಖಂಡಿತವಾಗಿಯೂ ನಾವು ಅವರ ಕೆಡುಕುಗಳನ್ನು ಅವರಿಂದ ದೂರಮಾಡಿ ಅವರಿಗೆ ಸುಖಾನುಭೂತಿಯ ಸ್ವರ್ಗೀಯ ತೋಟಗಳಲ್ಲಿ ಪ್ರವೇಶ ನೀಡುತ್ತಿದ್ದೆವು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಆಧ್ಯಾತ್ಮಿಕ ಹಾಗೂ ದೈಹಿಕ ಸ್ವಚ್ಛತೆಯ ಪ್ರಾಮುಖ್ಯತೆ

(1378) ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ. ನಬಿ(ಸ) ಎರಡು ಗೋರಿಗಳ ಬಳಿಯಿಂದ ಹೋಗುತ್ತಿದ್ದರು. ಆಗ ಅವರು ಹೇಳಿದರು. ಅವರಿಗೆ ಶಿಕ್ಷೆ ಕೊಡಲಾಗುತ್ತಾ ಇದೆ. ಅದು ಯಾವುದೇ ಮಹಾಪಾಪಗಳ ಕಾರಣಗಳಿಂದಲ್ಲ. ಮತ್ತೆ ಅವರು ನುಡಿದರು. ಅವರಲ್ಲಿ ಒಬ್ಬರು ಚಾಡಿ ಹೇಳುತ್ತಾ ತಿರುಗುತ್ತಿದ್ದರು. ಮತ್ತು ಇನ್ನೊಬ್ಬರು ಮಾತ್ರ ಮಾಡುವಾಗ ಜಾಗ್ರತೆ ವಹಿಸುತ್ತಿರಲಿಲ್ಲ. ಹಝ್ರತ್ ಇಬ್ನು ಅಬ್ಬಾಸ್ ಹೇಳಿದರು. ಮತ್ತೆ ಅವರು ಒಂದು ಹಸುರಾದ ಕೊಂಬೆ ತೆಗೆದುಕೊಂಡರು. ಅದನ್ನು ಎರಡು ತುಂಡು ಮಾಡಿದರು. ಮತ್ತೆ ಅದರ ಒಂದೊಂದು ತುಂಡನ್ನು ಪ್ರತಿಯೊಂದು ಗೋರಿಯ ಮೇಲೆ ನೆಟ್ಟು ನುಡಿದರು. ಎಲ್ಲಿಯವರೆಗೆ ಇದು ಒಣಗುವುದಿಲ್ಲವೋ ಅಲ್ಲಿಯತನಕ ಶಿಕ್ಷೆಯಲ್ಲಿ ಕಡಿತಗೊಳಿಸಲಾಯಿತು.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. **"**ನಾವು ದೇವದೂತರ ಮೇಲೆ, ಅಲ್ಲಾಹನ ಗ್ರಂಥಗಳ ಮೇಲೆ, ರಸೂಲುಲ್ಲಾಹ್(ಸ) ರವರ ಹದೀಸುಗಳ ಮೇಲೆ, ಸ್ವರ್ಗ, ನರಕ, ಗೋರಿಯ ಶಿಕ್ಷೆ, ವಿಧಿ, ಅಂತ್ಯ ತೀರ್ಮಾನದ ದಿನದ ಈ ಎಲ್ಲದರ ಮೇಲೆ ನಿಷ್ಠಾಪೂರ್ವಕ ವಿಶ್ವಾಸ ತಂದಿರುತ್ತೇವೆ. ನಾವು ಇವುಗಳ ವಿವರಗಳನ್ನು ಅಲ್ಲಾಹನಿಗೆ ಬಿಟ್ಟುಬಿಡುತ್ತೇವೆ ಏಕೆಂದರೆ ಸಾಮಾನ್ಯವಾದ ಧರ್ಮವೆಂದರೆ ಮನುಷ್ಯನು ಅಸ್ಪಷ್ಟಗಳ ಮೇಲೆ ವಿಶ್ವಾಸ ಹೊಂದಬೇಕು ಮತ್ತು ವಿವರಗಳನ್ನು ಅಲ್ಲಾಹನಿಗೆ ಒಪ್ಪಿಸಬೇಕು.**" (ಮಲ್ಫೂಝಾತ್ ಸಂಪುಟ–5, ಪುಟ–134 ಮುದ್ರಣ ಖಾದಿಯಾನ್ 2003)**

(1381) ಹಝ್ರತ್ ಅನಸ್‌ಬಿನ್ ಮಾಲಿಕ್ ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ಯಾವ ಮುಸಲ್ಮಾನನ ಮೂವರು ಪ್ರೌಢಾವಸ್ಥೆಗೆ ಬಾರದ ಮಕ್ಕಳು ತೀರಿ ಹೋದರೆ ಅವರ ಕಾರುಣ್ಯದಿಂದಾಗಿ ಅವಶ್ಯಕವಾಗಿ ಅಲ್ಲಾಹನು ಅವರನ್ನು ಸ್ವರ್ಗಕ್ಕೆ ಕಳುಹಿಸುವನು. ಅವರು ಅವರ ಜೊತೆಗಿರುವರು.

**(ಸಹೀ ಬುಖಾರಿ ಸಂಪುಟ–2, ಕಿತಾಬುಲ್ ಜನಾಯಝ್ ಮುದ್ರಣ 2006 ಖಾದಿಯಾನ್)**

**ರಸೂಲುಲ್ಲಾಹ್(ಸ) ರವರ ಮೇಲೆ ಪ್ರವಾದಿತ್ವ ಅಂತ್ಯವಾಯಿತು ಎಂಬುದರ ತಾತ್ಪರ್ಯವೇನೆಂದರೆ ಸಹಜವಾಗಿ (ಭೌತಿಕ ರೂಪದಲ್ಲಿ) ಅವರ ಮೇಲೆ ಪ್ರವಾದಿತ್ವದ ಎಲ್ಲಾ ಮಹಿಮೆಗಳು ಅಂತ್ಯವಾಗಿವೆ. ಅಂದರೆ ಆದಂ(ಅ) ರವರಿಂದ ಹಿಡಿದು ಮರಿಯಮನ ಪುತ್ರ ಈಸಾ(ಅ) ರವರೆಗೆ ದಯಪಾಲಿಸಿದ ಎಲ್ಲಾ ವಿಭಿನ್ನ ರೀತಿಯ ಮಹಿಮೆಗಳು, ಆಯಾಯ ಪ್ರವಾದಿಗಳಿಗೆ ದೊರೆತದ್ದು ಹಝ್ರತ್ ರಸೂಲುಲ್ಲಾಹ್(ಸ) ರವರಲ್ಲಿ ಸೇರಿವೆ. ಆ ಅರ್ಥದಲ್ಲಿ ಅವರು ಸಹಜವಾಗಿ ಖಾತಮುನ್ನಬಿಯೀನ್ ಆಗಿರುವರು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಹಝ್ರತ್ ರಸೂಲುಲ್ಲಾಹ್(ಸ) ರವರ ಖಾತಮುನ್ನಬಿಯೀನ್ ಸ್ಥಾನಮಾನ ನಮಗೆ ಅಲ್ಲಾಹನು ದಯಪಾಲಿಸಿದಂತಹ ನಬಿಯು, ಖಾತಮುಲ್ ಮುಮಿನೀನ್, ಖಾತಮುಲ್, ಆರಿಫೀನ್ ಮತ್ತು ಖಾತಮುನ್ನಬಿಯೀನ್ ಆಗಿರುವರು. ಅದೇ ರೀತಿ ಅವರ ಮೇಲೆ ಅವತರಿಸಿದಂತಹ ಗ್ರಂಥಗಳು ಜಾಮಿವುಲ್ ಕುತುಬ್ ಮತ್ತು ಖಾತಮುಲ್ ಕುತುಬ್ ಆಗಿದೆ. ಪ್ರವಾದಿತ್ವವು ಕುತ್ತಿಗೆ ಹಿಚುಕಿ ಅಂತ್ಯಗೊಳಿಸುವ ರೀತಿಯಲ್ಲಿ ಅಂತ್ಯಗೊಂಡಿಲ್ಲ. ಅಂತಹ ರೀತಿ ಅತ್ಯಂತ ಗೌರವಯುತ ಅನಿಸುವುದಿಲ್ಲ. ಬದಲು ರಸೂಲುಲ್ಲಾಹ್(ಸ) ರವರ ಮೇಲೆ ಪ್ರವಾದಿತ್ವ ಅಂತ್ಯವಾಯಿತು ಎಂಬುದರ ತಾತ್ಪರ್ಯವೆಂದರೆ ಸಹಜವಾಗಿ (ಭೌತಿಕ ರೂಪದಲ್ಲಿ) ಅವರ ಮೇಲೆ ಪ್ರವಾದಿತ್ವದ ಎಲ್ಲಾ ಮಹಿಮೆಗಳು ಅಂತ್ಯವಾಗಿವೆ. ಅಂದರೆ ಆದಂ(ಅ) ರವರಿಂದ ಹಿಡಿದು ಮರಿಯಮನ ಪುತ್ರ ಈಸಾ(ಅ) ರವರೆಗೆ ದಯಪಾಲಿಸಿದ ಎಲ್ಲಾ ವಿಭಿನ್ನ ರೀತಿಯ ಮಹಿಮೆಗಳು ಆಯಾಯ ಪ್ರವಾದಿಗಳಿಗೆ ದೊರೆತದ್ದು ಹಝ್ರತ್ ರಸೂಲುಲ್ಲಾಹ್(ಸ) ರವರಲ್ಲಿ ಸೇರಿವೆ. ಆ ಅರ್ಥದಲ್ಲಿ ಅವರು ಸಹಜವಾಗಿ ಖಾತಮುನ್ನಬಿಯೀನ್ ಆಗಿರುವರು. ಅದರಂತೆಯೇ ಎಲ್ಲಾ ಶಿಕ್ಷಣಗಳ ಸಂಗ್ರಹ, ವಸಾಯ (ಉಪದೇಶಗಳು) ಮತ್ತು ಆಧ್ಯಾತ್ಮಿಕ ಜ್ಞಾನ, ವಿಭಿನ್ನ ಗ್ರಂಥಗಳಲ್ಲಿರುವುದು ಪವಿತ್ರ ಖುರ್‌ಆನ್‌ನಲ್ಲಿ ಬಂದು ಅಂತ್ಯವಾಗಿರುತ್ತದೆ. ಹೀಗೆ ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ ಆಗಿರುತ್ತದೆ.

**ನಾವು ಪೂರ್ವ ಪ್ರಜ್ಞೆಯಿಂದ ರಸೂಲುಲ್ಲಾಹ್(ಸ) ರವರನ್ನು ಖಾತಮುನ್ನಬಿಯೀನ್ ಎಂದು ನಂಬುತ್ತೇವೆ.**

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಧರ್ಮವು ಅವಿಶ್ವಾಸವನ್ನು ನುಂಗುತ್ತಿದ್ದ ಕಾಲವೊಂದಿತ್ತು.**

**ಇಂದು ಅವಿಶ್ವಾಸ (ಕುಫ್ರ) ಇಸ್ಲಾಮ್ ಧರ್ಮವನ್ನು ನುಂಗುತ್ತಿದೆ. ಸ್ವಯಂ ಮುಸಲ್ಮಾನರು ಇಸ್ಲಾಮ್ ಧರ್ಮದ ಈ ಆಜ್ಞೆ ಪಾಲಿಸಲು ಸಿದ್ಧರಿಲ್ಲ. ಆ ಆಜ್ಞೆಯು ಇಲ್ಲ ಎನ್ನುತ್ತಿರುವಾಗ ಉಳಿದದ್ದಾದರೂ ಏನು.**

**ಅಲ್ಲಾಹನು ಮುಸಲ್ಮಾನರಿಗೆ ಸದ್ಬುದ್ಧಿ ನೀಡುವಂತಾಗಲಿ, ತನ್ನ ದೋಷಗಳನ್ನು ಇಸ್ಲಾಮ್ ಧರ್ಮಕ್ಕೆ ಅಂಟಿಸದಿರಲಿ. ಸ್ವಯಂ ತಾವು ಸನ್ನಡತೆ ಹೊಂದದೆ ಅದರ ಪರಿಣಾಮದ ಬಗ್ಗೆ ಪವಿತ್ರ ಖುರ್‌ಆನ್‌ಗೆ ಸಂಬಂಧ ಜೋಡಿಸುತ್ತಾರೆ.**

ಸಯ್ಯದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಇಬ್ರಾಹಿಂ ವಚನ 8 ವ **ಇಝ್‌ತಅಝ್ಝನ ರಬ್ಬುಕುಮ್ ಲಿನ್ ಶಕರ್‌ತುಮ್ ಲಅಝೀದನ್ನಕುಮ್ ವಲಿನ್‌ಕಫರ್‌ತುಮ್** ಇನ್ನ **ಅಝಾಬಿ ಲಶದೀದ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಈ ವಚನದಲ್ಲಿ ಒಂದು ಮಹೋನ್ನತವಾದ ತತ್ವ ವಿವರಿಸಲಾಗಿದೆ. ಅದೇನೆಂದರೆ ಎಲ್ಲಾ ಪ್ರಗತಿಗಳು ಕೃತಜ್ಞರಾಗುವುದರಲ್ಲಿ ಅಡಗಿದೆ. ಕೃತಜ್ಞತೆ ಅರ್ಥ ಶಬ್ದಕೋಶದಲ್ಲಿ ವಿವರಿಸಿದಂತೆ, ಉಪಕಾರ ವನ್ನಿಸುವುದು ಮತ್ತು ಉಪಹಾರ ಮಾಡಿದವರ ಗುಣಗಾನ ಮಾಡುವುದಾಗಿದೆ. ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವುದೆಂದರೆ, ಮನುಷ್ಯನು ಅವನ ಅನುಗ್ರಹಿತ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ಸರಿಯಾದ ಸಮಯಕ್ಕೆ ಬಳಸುವುದಾಗಿದೆ. ವ್ಯಕ್ತಿಯೊಬ್ಬನು ತಮಗೆ ಕೊಟ್ಟ ವಸ್ತುವನ್ನು ಬಳಸದೇ ಇದ್ದರೆ ಅವನ ಪ್ರಶಂಸೆ ಕೇವಲ ಪದಗಳಿಗೆ ಸೀಮಿತವಾಗಿರುತ್ತದೆ ಅದು ಕೃತಜ್ಞತೆ ಅಲ್ಲ. ಕೃತಜ್ಞತೆಗಾಗಿ ಅವಶ್ಯವಿರುವುದೇನೆಂದರೆ ಸದ್ಬಳಕೆಯಾಗಿರಬೇಕು. ಈ

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

## ಅಬ್ದುಲ್ಲ ಆಥಮನಿಗೆ ನಾಲ್ಕು ಸಾವಿರ ರೂಪಾಯಿಗಳ ಭಾರಿ ಬಹುಮಾನ ಅವರು ನಾನು ಇಸ್ಲಾಮಿನ ಭವಿಷ್ಯವಾಣಿಯ ಪ್ರಭಾವದಿಂದ ಹೆದರಿಕೊಂಡಿಲ್ಲ ಎಂದು ಒಪ್ಪಿಕೊಳ್ಳಬೇಕು

### ಅಪಮಾನ ಮತ್ತು ನಾಚಿಕೆಯ ಕಲೆಯಿಂದ ತಪ್ಪಿಸಿಕೊಳ್ಳಲು ಮಾರ್ಟಿನ್ ಕ್ಲಾರ್ಕ್ ನಡೆಸಿದ ಸಂಚೆಂದರೆ, ಕ್ರೈಸ್ತ ಧರ್ಮದಲ್ಲಿ ಆಣೆ ಮಾಡುವುದೆಂದರೆ, ಇಸ್ಲಾಮ್ ಧರ್ಮದಲ್ಲಿ ಹಂದಿಯ ಮಾಂಸ ನಿಷೇಧವಾದ ರೀತಿಯಲ್ಲಿಯೇ ನಿಷೇಧವಾಗಿರುತ್ತದೆ.

ಆಥಮನಿಗೋಸ್ಕರ ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಾವಿರ, ಎರಡು ಸಾವಿರ, ಮತ್ತೆ ಮೂರು ಸಾವಿರ ಕೊನೆಯಲ್ಲಿ ನಾಲ್ಕು ಸಾವಿರ ರೂಪಾಯಿಗಳ ಬಹುಮಾನ ನಿಗದಿಪಡಿಸಿದರು. ಕಾರಣ ಆಥಮ್ ಆಣೆ ಮಾಡಿ ಹೇಳಲಿ. ನಾನು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿಯಿಂದ ಹೆದರಲಿಲ್ಲ ಮತ್ತು ಆ ಅವಧಿಯಲ್ಲಿ ಇಸ್ಲಾಮಿನ ಸತ್ಯತೆಯ ಭಾವ ಮೂಡಲಿಲ್ಲ ಎಂದು. ಆಗಲೂ ಅವರು ಒಂದು ವರ್ಷದವರೆಗೆ ಜೀವಂತರಾಗಿದ್ದರೆ, ಅವನು ಸತ್ಯವಂತನು, ಮರಣ ಹೊಂದಿದರೆ ಲೋಕ ಸಾಕ್ಷಿಯಾಗಿರುವುದು ಹಝ್ರತ್ ಮಸೀಹ್ ಮೌಊದ್(ಅ) ರವರ ಭವಿಷ್ಯವಾಣಿ ಸತ್ಯವಾಯಿತು. ಅಥಮನಿಗೆ ದೃಢವಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಸತ್ಯವಂತರಾಗಿದ್ದಾರೆ ಮತ್ತು ಅವರ ಭವಿಷ್ಯವಾಣಿ ಸತ್ಯವಾಗಿದೆ. ಆದ್ದರಿಂದಲೆ ಅವರು ಅಷ್ಟೊಂದು ಭಾರಿ ಬಹುಮಾನ ಘೋಷಿತವಾದರೂ ಆಣೆ ಮಾಡಲು ಸಿದ್ಧರಾಗಿಲ್ಲ. ಆದರೆ ತನ್ನ ಮತ್ತು ತನ್ನ ಸಮುದಾಯದ ಅಪಮಾನವನ್ನು ತಕ್ಕಮಟ್ಟಿಗಾಗಿ ಹಗುರಗೊಳಿಸಲು ನಮ್ಮ ಧರ್ಮದಲ್ಲಿ ಆಣೆ ಮಾಡುವುದು ನಿಷೇಧವಿದೆ ಎಂಬ ಈ ನೆಪ ಒಡ್ಡಿದನು.. ಮಾರ್ಟಿನ್ ಕ್ಲಾರ್ಕ್ ಆಥಮ್‌ನನ್ನು ಬೆಂಬಲಿಸಿ ಬರೆದನು. ನಮ್ಮ ಧರ್ಮದಲ್ಲಿ ಆಣೆ ಮಾಡುವುದೆಂದರೆ ಇಸ್ಲಾಂ ಧರ್ಮದಲ್ಲಿ ಹಂದಿಯ ಮಾಂಸ ನಿಷೇಧವಿದ್ದಂತೆಯೇ ನಿಷೇಧವಾಗಿದೆ. ಅದರ ಉತ್ತರವಾಗಿ ನಾವು ಈ ಕೆಳಗೆ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತಿದ್ದೇನೆ. ಅವರು ಹೇಳಿದರು.

ಪಾದರಿಗಳಿಗೆ ಚಿಂತೆಯಾಗಿತ್ತು. ಆಥಮನು ನಮ್ಮ ಮುಖಕ್ಕೆ ಕಪ್ಪು ಮಸಿ ಬಳಿದಿದ್ದಾನೆ. ಅದನ್ನು ಡಾ॥ ಕ್ಲಾರ್ಕ್ ಅಪ್ಪಟ ವಿಶ್ವಾಸಘಾತಕ ರೀತಿಯಲ್ಲಿ ಒಂದು ಪತ್ರಿಕೆಯಲ್ಲಿ ಹೊರಡಿಸಿದನು. ಆದರ ಸಾರಾಂಶ ಹೀಗಿತ್ತು. ಕ್ರೈಸ್ತ ಧರ್ಮದಲ್ಲಿ ಆಣೆ ಮಾಡುವುದು, ಇಸ್ಲಾಮ್ ಧರ್ಮದಲ್ಲಿ ಹಂದಿ ಮಾಂಸ ತಿನ್ನುವುದು ನಿಷೇಧ ವಿದ್ದ ರೀತಿಯಲ್ಲಿ ನಿಷೇಧವಿದೆ. ಆದರೆ ಆ ನಾಚಿಕೆಗಡುಕನಿಗೆ ಒಂದಿಷ್ಟಾದರೂ ಇಂಜೀಲ್, ಪತ್ರಸ್ ಮತ್ತು ಪೌಲೂಸಿನ ಮರ್ಯಾದೆಯ ಬಗ್ಗೆ ಯೋಚನೆ ಸಹ ಮಾಡಲಿಲ್ಲ. ಈ ಉದಾಹರಣೆ ಸರಿಯಾಗಿದ್ದಲ್ಲಿ ಪೌಲೂಸನಿಗೆ ವಿಶ್ವಸ್ಥ ಎನ್ನುವುದು ತಪ್ಪಾಗುತ್ತದೆ. ಅವನೇ ಎಲ್ಲರಿಗಿಂತ ಮೊದಲು ಈ ಅಪವಿತ್ರ ಹೆಜ್ಜೆ ಇಟ್ಟಿರುತ್ತಾನೆ.

ಯಾವ ರೀತಿ ಒಬ್ಬ ಮುಸಲ್ಮಾನನು ಹಂದಿಯನ್ನು ಧರ್ಮಬದ್ಧ ಎಂದು ಭಾವಿಸುವನೋ. ಎಲ್ಲ ಪಂಥಗಳ ಒಮ್ಮತಾಭಿಪ್ರಾಯದಿಂದ ಕಾಫಿರ್ (ಅವಿಶ್ವಾಸಿ) ಆಗಿ ಬಿಡುತ್ತಾನೆ ಮತ್ತು ಅದನ್ನು ತಿನ್ನುವವನು ಅತ್ಯಂತ ದುಷ್ಕರ್ಮಿ ಎಂದಾಗುವುದು. ಹಾಗಾದರೆ ನಮಗೆ ಡಾ॥ ಕ್ಲಾರ್ಕ್ ಈ ಮಾತಿಗೆ ಅವಶ್ಯಕವಾಗಿ ಉತ್ತರ ನೀಡಬೇಕು. ಅವು ಪೌಲೂಸರ ಪೈಕಿ ಈ ಎರಡೂ ಸಂಬೋಧನೆಗಳಲ್ಲಿ ಯಾವ ಸಂಬೋಧನೆ ಎಂದು ಹೆಚ್ಚು ಇಷ್ಟಪಡುವವರಾಗಿದ್ದಾರೆ.

ಸತ್ಯದ ಮಾತನ್ನು ಮರೆಮಾಚುವುದು ಅವಿಶ್ವಾಸಿಗಳ ಮತ್ತು ಶಾಪಗ್ರಸ್ತರ ಕೆಲಸವಾಗಿರುತ್ತದೆ. ಪೌಲೂಸನು ಆಣೆ ಮಾಡಿರುವುದು ಸತ್ಯವಲ್ಲವೆ, ಪತ್ರಸನು ಆಣೆ ಮಾಡಿದನು. ಝುಬೂರಿನಲ್ಲಿ ಬರೆಯಲಾಗಿದೆ. ಸುಳ್ಳುಗಾರನಾದವನೇ ಆಣೆ ಮಾಡುವುದಿಲ್ಲ. (ನೋಡಿ. ಜ್ಜಬೂರ್ 63 ವಚನ 11) ನಾವೇನು ಒಪ್ಪಬೇಕು, ಕೇವಲ ಆಥಮ ಸಾಹೇಬರೊಬ್ಬರೇ ಆಣೆ ಮಾಡುವುದರಿಂದ ಉಳಿದುಕೊಂಡಿದ್ದಾರೆ. ಇತರ ಎಲ್ಲಾ ಪೂರ್ವ ಕ್ರೈಸ್ತ ಮಹಾತ್ಮರುಗಳ ಆಣೆಯ ಹಂದಿ ತಿನ್ನುತ್ತಿದ್ದರು. ಈಗಲೂ ಸಹ ಆಣೆ ಎಂಬ ಹಂದಿ ತಿನ್ನದೇ ಯಾವ ಉನ್ನತ ದರ್ಜೆಯ ಹುದ್ದೆ, ಇತರರಿಗೆ ದೊರೆಯುವಂತೆ ಯಾವ ಕ್ರೈಸ್ತನಿಗೂ ದೊರೆಯುವುದಿಲ್ಲ ಎಂದು.

ಸೋಜಿಗವೆಂದರೆ ಆಥಮ್ ಸಾಹಿಬರು ಎರಡು ಸಲ ನ್ಯಾಯಾಲಯದಲ್ಲಿ ಆಣೆ ಹಾಕಿರುವುದು ಸಾಬೀತಾಗಿದೆ. ಅವರು ಅದನ್ನು ನಿರಾಕರಿಸಿದರೆ ನಾವು ನಕಲು ತೋರಿಸುವೆವು. (ಝಿಯಾವುಲ್ ಹಖ್, ರೂಹಾನಿ ಖಝಾಇನ್. ಸಂಪುಟ–9, ಪುಟ–11)

### ಪೌಲೂಸನನ್ನು ಹಂದಿ ತಿನ್ನುವುದಕ್ಕೆ ಹೋಲಿಸುವುದು ಆಥಮ್‌ನ ರುಜುವಾತಿಗೆ ಒಂದು ಸಾಕ್ಷ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಈ ಜನರು ಒಂದು ಸತ್ಯವನ್ನು ಮರೆಮಾಚಲು ತಮ್ಮ ಪೌಲೂಸರನ್ನು ಮುಸಲ್ಮಾನನಾಗಿ ಹಂದಿ ತಿನ್ನುವವನೊಂದಿಗೆ ಹೋಲಿಸಿದ್ದಾರೆ. ಅದರಿಂದ ವಿವೇಕವಂತನೊಬ್ಬನು ತಿಳಿಯಬಹುದು. ಒಂದರ್ಥದಲ್ಲಿ ಆಥಮನು ಮತ್ತು ಅವರ ಸಂಗಡಿಗರು ಯಾವ ಭಯಕ್ಕೆ ಒಳಗಾಗಿದ್ದಾರೆ. ಅವರು ನೆಪಗಳನ್ನು ಮತ್ತು ನಾಚಿಕೆಗೇಡಿನ ದಾರಿಯನ್ನು ಹಿಡಿದಿದ್ದಾರೆ. ಆದರೆ ಆಥಮನು ಆಣೆ ಮಾಡಲು, ತೋಳನ ಆಕ್ರಮಣದಿಂದ ಹೆದರುವ ರೀತಿಯಲ್ಲಿ ಹೆದರಿಕೊಂಡಿದ್ದಾರೆ. (ಝಿಯಾಉಲ್ ಹಖ್, ರೂಹಾನಿ ಖಝಾಇನ್, ಸಂಪುಟ–9, ಪುಟ–274)

ಇದೊಂದು ಸುಳ್ಳು ಸಮುದಾಯದ ಸುಳ್ಳು ನೆಪವಾಗಿದೆ. ಬೈಬಲ್‌ನಲ್ಲಿ ದೇವನಾಣೆ, ದೇವದೂತರ ಆಣೆ, ಪ್ರವಾದಿಗಳ ಆಣೆ ವಹಿಸಿದ್ದು ಪುರಾವೆಗಳಿವೆ. ಇಂಜೀಲಿನಲ್ಲಿ ಮಸೀಹನು ಆಣೆ ಮಾಡಿದ್ದು ಪತ್ರೂಸನ ಆಣೆ. ಪೌಲೂಸನ ಆಣೆ ಬರೆಯಲ್ಪಟ್ಟಿದೆ.

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಕ್ರೈಸ್ತಮತದ ಪುರಾತನವಾದ ಮೋಸಗಾರಿಕೆ ಅವರಿಗೆ ಇತ್ತ ಬರಲು ಅನುಮತಿ ನೀಡಲಿಲ್ಲ. ಬದಲಾಗಿ ಈ ಸುಳ್ಳು ನೆಪ ಪ್ರಸ್ತುತಪಡಿಸಿದರು. ಆಣೆ ಮಾಡುವುದು ನಮ್ಮ ಧರ್ಮದಲ್ಲಿ ನಿಷೇಧವಾಗಿದೆ ಎಂದು. ಅಂದರೆ ಸಮಾಧಾನಕರ ಸಾಕ್ಷ್ಯಕ್ಕಾಗಿ ಆಣೆ ಮಾಡುವುದು, ಅದು ಸಂಶಯಗಳನ್ನೂ ಆರೋಪಗಳನ್ನು ದೂರ ಮಾಡಲು ಕಾರಣವಾಗುತ್ತದೆ. ಮತ್ತು ಸಮಾಧಾನಕರ ಫಲಿತಾಂಶ ಹೊರಬರುತ್ತದೆ. ಅದು ಸತ್ಯವನ್ನು ಜಾಹೀರುಪಡಿಸುವ ಅಂತಿಮ ಮಾರ್ಗವಾಗಿದೆ. ಐಹಿಕ ಸರಕಾರಗಳಲ್ಲಿ ದೈವಿಕ ಭಯ ಪಡೆಯಲು ಮತ್ತು ಸುಳ್ಳುಗಾರನ ಬಾಯಿಮುಚ್ಚಿಸಲು ಒಂದು ಸಾಧನವಾಗಿದೆ. ಅದು ಇಂಜೀಲಿನ ಶಿಕ್ಷಣದನ್ವಯ ನಿಷೇಧವಿದ್ದರೆ ಕ್ರೈಸ್ತರು ಅದನ್ನು ನ್ಯಾಯಾಲಯದಲ್ಲಿ ಬಳಸುವುದನ್ನು ನಿಲ್ಲಿಸಬೇಕು. ಆದರೆ ಪ್ರತಿಯೊಬ್ಬ ವಿವೇಕವಂತನು ತಿಳಿಯಬಹುದಾಗಿದೆ. ಅದು ಹಝ್ರತ್ ಮಸೀಹರ ಮೇಲೆ ಒಂದು ಅಪವಾದವಾಗಿದೆ. ಹಝ್ರತ್ ಈಸಾ(ಅ) ಎಂದೂ ಸಾಕ್ಷ್ಯ ನೀಡಲು ಸಾಕ್ಷಿದಾರರಿಗೆ ಬಾಗಿಲು ಮುಚ್ಚಲಿಲ್ಲ. ಹಝ್ರತ್ ಈಸಾ(ಅ) ಚೆನ್ನಾಗಿ ಬಲ್ಲವರಾಗಿದ್ದರು. ಆಣೆ ಮಾಡುವುದು ಸಾಕ್ಷ್ಯದ ಆತ್ಮವಾಗಿದೆ, ಆಣೆ ವಹಿಸದೆ ಮಾಡಿದಂತಹ ಸಾಕ್ಷ್ಯ ಕೇವಲ ಕಕ್ಷಿದಾರನ ವಾದವಾಗಬಹುದೇ ಹೊರತು ಸಾಕ್ಷಿ ಎನ್ನಲಾಗುವುದಿಲ್ಲ. ಇಂತಹದೊಂದು ಸಂಶೋಧನೆಗಳಿಂದ ಧೃಢಪಟ್ಟ ಮಾರ್ಗ ಆಣೆ ಮಾಡುವುದನ್ನು ನಿಷೇಧಿಸಲು ಹೇಗೆ ಸಾಧ್ಯವಿತ್ತು? ದೈವಿಕ ಅಧಿನಿಯಮ ಮತ್ತು ಮಾನವನ ಸಹಜಗುಣ ಸ್ವಯಂ ಸಾಕ್ಷ್ಯವಾಗಿದೆ. ವಿವಾದಗಳನ್ನು ಇತ್ಯರ್ಥಪಡಿಸಲು ಅಂತಿಮ ಮಾರ್ಗ ಆಣೆ ವಹಿಸುವುದಾಗಿದೆ. ಸತ್ಯಸಂಧನಾದ ಮನುಷ್ಯನೊಬ್ಬನು ಯಾರಾದಾದರು ಆರೋಪಕ್ಕೆ ಮತ್ತು ಸಂಶಯಕ್ಕೆ ಒಳಪಡುವವನಾದರೆ, ಯಾವ ಮಾನವೀಯ ಸಾಕ್ಷಿ ಸಮಾಧಾನಕರವಾಗಿರುವುದಿಲ್ಲ. ಆಣೆ ಸಹಜವಾಗಿ ದೇವನ ಸಾಕ್ಷಿ ತನ್ನ ಸತ್ಯವಾದ ನೆಲೆಯಲ್ಲಿ ಸ್ವೀಕರಿಸುತ್ತಾನೆ. ದೇವನ ಸಾಕ್ಷಿ ಎಂದರೆ ಅದೇ ಆಗಿದೆ. ಅವನು ಆ ಆಗೋಚರವಾದ ದೇವನ ಹೆಸರಿನಲ್ಲಿ ಆಣೆ ವಹಿಸಿ ತನ್ನ ಸತ್ಯ ಪ್ರಸ್ತುತಪಡಿಸಬೇಕು. ಸುಳ್ಳುಗಾರನಾದರೆ ಅಲ್ಲಾಹನ ಶಾಪ ಸ್ವೀಕರಿಸಬೇಕು. ಅದುವೇ ಅಂತಿಮ ವಿಧಾನವಾಗಿರುತ್ತದೆ. ಅದು ಪ್ರವಾದಿಗಳಿಂದಲೂ ಸಾಬೀತಾಗಿದೆ. ಆದರೆ ಆಥಮ್ ಸಾಹಿಬರು ಹೇಳುತ್ತಾರೆ ಆಣೆ ವಹಿಸುವುದು ನಿಷೇಧವಿದೆ ಎಂದು. ವಿಶ್ವಾಸಕ್ಕೆ ವಿರೋಧವಾಗಿದೆ ಎಂದು. ನಾವು ಈಗ ನೋಡಬಯಸುತ್ತೇವೆ. ಅವರ ಈ ನೆಪ ಸರಿಯಾಗಿಯೋ ಅಥವಾ ಇಲ್ಲವೋ? ಏಕೆಂದರೆ ಒಂದು ವೇಳೆ ಸರಿ ಇದ್ದರೆ ವಾಸ್ತವದಲ್ಲಿ ಅವರು ಆಣೆ ವಹಿಸುವುದರಲ್ಲಿ ವಿವಶರಾಗಿದ್ದಾರೆ. ಆದರೆ ಈ ಮಾತನ್ನು ಯಾರು ಅಲ್ಲಗಳೆಯಲಾರರು. ಕ್ರೈಸ್ತರಲ್ಲಿ ಎಲ್ಲಾ ಸ್ತರದವರು ಧಾರ್ಮಿಕರಾಗಲಿ ಅಥವಾ ಐಹಿಕ ನೆಲೆಯಲ್ಲಿ ಸಾಕ್ಷ್ಯ ನೀಡಲು ಕರೆಯಲಾದರೆ ಆಣೆ ವಹಿಸುತ್ತಾರೆ. ಮತ್ತು ಇಂಜೀಲನ್ನು ಕೈಯಲ್ಲಿ ಎತ್ತಿಕೊಳ್ಳುತ್ತಾರೆ. ಎಷ್ಟು ಹಿರಿಯ ಪಾದರಿಯಾದರೂ ಸಾಕ್ಷಿ ನೀಡಲು ನ್ಯಾಯಾಲಯಕ್ಕೆ ಕರೆದಾಗ ಅವನು ಇಂಜೀಲಿನ ದೃಷ್ಟಿಯಿಂದ ಆಣೆ ವಹಿಸುವುದು ನಿಷೇಧವಾಗಿದೆ ಎಂಬ ಈ ನೆಪ ಮುಂದೆ ಮಾಡುವುದಿಲ್ಲ.

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹನಾಣೆ, ಹಝ್ರತ್ ಉಮರ್(ರ) ಹೇಳಿದ್ದನ್ನೆಲ್ಲ ಈಡೇರಿಸುತ್ತಿದ್ದರು. ಕಠಿಣತೆ ತೋರಿಸಬೇಕಾದಲ್ಲಿ ಕಠಿಣವಾಗಿ ವರ್ತಿಸುತ್ತಿದ್ದರು ಮತ್ತು ಸೌಮ್ಯವಾಗಿ ವರ್ತಿಸಬೇಕಾದ ಸಂದರ್ಭಗಳಲ್ಲಿ ಸೌಮ್ಯವಾಗಿ ವರ್ತಿಸುತ್ತಿದ್ದರು. ಅವರು ಜನರ ಮಕ್ಕಳ ತಂದೆಯಾಗಿದ್ದರು.**

**ಹಝ್ರತ್ ಉಮರರ(ರ) ಗಾಂಭೀರ್ಯ ಮತ್ತು ವೈಭವಕ್ಕೆ ಭಯಪಟ್ಟು ರೋಮ್ ಮತ್ತು ಪೇರ್ಶಿಯದ ಆಡಳಿತಗಳು ನಡುಗುತ್ತಿದ್ದುವು. ಆದರೆ ಗ್ರಾಮವಾಸಿಯಾದ ಒಬ್ಬಳು ಹೆಂಗಸಿನ ಮಕ್ಕಳು ಹಸಿವೆಯಿಂದ ಇರುವುದನ್ನು ನೋಡಿದಾಗ ಅಂತಹ ವ್ಯಕ್ತಿಯಾದ ಹಝ್ರತ್ ಉಮರ್(ರ) ತಳಮಳಗೊಳ್ಳುತ್ತಾರೆ. ತನ್ನ ಹೆಗಲ ಮೇಲೆ ಹಿಟ್ಟಿನ ಗೋಣಿಯನ್ನು ಎತ್ತಿಕೊಂಡು, ತುಪ್ಪದ ಡಬ್ಬಿಯನ್ನು ಕೈಯಲ್ಲಿ ಎತ್ತಿಕೊಂಡು ಅವರ ಬಳಿಗೆ ಹೋಗುತ್ತಾರೆ. ಆ ಮಕ್ಕಳನ್ನು ತಿನ್ನಿಸಿ, ಅವರೆಲ್ಲರೂ ನಿದ್ದೆ ಹೋಗುವ ತನಕ ಅಲ್ಲಿಂದ ಮರಳಿ ಬರುವುದಿಲ್ಲ. (ಹಝ್ರತ್ ಮುಸ್ಲಿಹ್ ಮೌಊದ್(ರ))**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ನಾಲ್ಕು(4) ದಿವಂಗತರಾದ ಅಬ್ದುಲ್‌ವಹೀದ್ ವಡಾಇಚ್ ಸಾಹಿಬ್, ಅಬ್ದುಲ್ ಮಾಲಿಕ್ ಶಮೀಂ ಸಾಹಿಬ್‌ರ ಪತ್ನಿಯಾದ ಅಮತುನ್ನೂರ್ ಸಾಹಿಬ, ಹಿಫಾಝುತೇ ಖಾಸಿನ ಆಫೀಸರ್ ಆದ ಸನ್ಮಾನ್ಯ ನಾಸಿರ್ ಅಹ್ಮದ್ ಖಾನ್ ಬಹಾದುರ್ ಶೇರ್ ಸಾಹಿಬ್‌ರ ಪತ್ನಿಯಾದ ಬಿಸ್ಮಿಲ್ಲಾಹ್ ಬೇಗಂ ಸಾಹಿಬ, ಮತ್ತು ರಾವಲ್ಪಿಂಡಿಯ ಚೌಧರಿ ಅಬ್ದುಲ್‌ಗ್ಷನಿ ಸಾಹಿಬ್‌ರ ಮಗನಾದ ಸನ್ಮಾನ್ಯ ಕರ್ನಲ್ ಜಾವೇದ್ ರುಶ್ದಿ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25-06-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ . اَلرَّحْمٰنِ الرَّحِيْمِ . مٰلِكِ يَوْمِ الدِّيْنِ .

إِيَّاكَ نَعْبُدُ وَإِيَّاكَ نَسْتَعِيْنُ . اِهْدِنَا الصِّرَاطَ الْمُسْتَقِيْمَ .

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ .

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ ಇಂದು ಇನ್ನೂ ಹೇಳುವೆನು. ಝೈದ್ ಬಿನ್ ಅಸ್ಲಂ ತನ್ನ ತಂದೆಯಾದ ಅಸ್ಲಮ್‌ನಿಂದ ವರದಿ ಮಾಡುತ್ತಾರೆ: ಒಂದು ಬಾರಿ ಅವರು ಹಝ್ರತ್ ಉಮರ್‌ರೊಂದಿಗೆ(ರ) ಮದೀನದಿಂದ ಮೂರು ಮೈಲುಗಳ ದೂರದಲ್ಲಿರುವ ಹುರ್ರ ವಾಖಿಂ ಕಡೆಗೆ ಹೊರಟೆವು. ಸರಾರ್ ಎಂಬ ಜಾಗಕ್ಕೆ ತಲುಪಿದಾಗ, ಅಲ್ಲಿ ಒಂದು ಬೆಂಕಿ ಹೊತ್ತಿಸಲಾಗಿತ್ತು. ಹಝ್ರತ್ ಉಮರ್(ರ) ಹೇಳಿದರು: "ಹೇ ಅಸ್ಲಂ, ಅವರು ಯಾತ್ರಿಕರು ಎಂದು ತೋರುತ್ತದೆ. ಅವರು ರಾತ್ರಿಯ ಮತ್ತು ಚಳಿಯ ಕಾರಣದಿಂದ ಕಷ್ಟವನ್ನು ಅನುಭವಿಸುತ್ತಿದ್ದಾರೆ. ನನ್ನೊಂದಿಗೆ ಬಾ," ಹೀಗೆ ನಾವು ಬೇಗ ಬೇಗನೇ ಅವರ ಬಳಿಗೆ ಹೋದೆವು. ಸಮೀಪಕ್ಕೆ ಹೋಗಿ ನೋಡಿದಾಗ ಅಲ್ಲಿ ಒಬ್ಬಾಕೆ ಸ್ತ್ರೀ ತನ್ನ ಕೆಲವು ಮಕ್ಕಳೊಂದಿಗೆ ಇದ್ದಳು. ಒಂದು ಮಡಿಕೆಯನ್ನು ಒಲೆಯಲ್ಲಿ ಇರಿಸಲಾಗಿತ್ತು. ಮಕ್ಕಳು ಹಸಿವೆಯ ಕಾರಣದಿಂದ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಮಕ್ಕಳು ಅಳಲು ಕಾರಣವೇನೆಂದು ಆ ಮಹಿಳೆಯೊಡನೆ ಹಝ್ರತ್ ಉಮರ್(ರ) ಕೇಳಿದರು. ಮಕ್ಕಳು ಹಸಿವೆಯ ಕಾರಣದಿಂದ ಅಳುತ್ತಿದ್ದಾರೆ ಎಂದು ಅವಳು ಹೇಳಿದಳು. ಈ ಮಡಿಕೆಯಲ್ಲಿ ಏನಿದೆ ಎಂದು ಅವರು ಕೇಳಿದರು. ಆ ಸ್ತ್ರೀ ಹೇಳಿದಳು: ಅದರಲ್ಲಿ ನೀರು ಮಾತ್ರವಿದೆ ಮತ್ತು ಮಕ್ಕಳು ನಿದ್ದೆ ಹೋಗುವಂತೆ ಮಾಡಲು ಅದರ ನೆಪದಲ್ಲಿ ಮಕ್ಕಳನ್ನು ಸಮಾಧಾನಪಡಿಸುತ್ತಿದ್ದೇನೆ. ಅಲ್ಲಾಹನು ನಮ್ಮ ಮತ್ತು ಉಮರರ ನಡುವೆ ತೀರ್ಮಾನ ಮಾಡುವನು. ಹಝ್ರತ್ ಉಮರ್(ರ) ಹೇಳಿದರು: ಹೇ ಸ್ತ್ರೀ, ಅಲ್ಲಾಹನು ನಿನ್ನ ಮೇಲೆ ಕೃಪೆದೋರಲಿ. ಉಮರಿಗೆ ನಿಮ್ಮ ಸ್ಥಿತಿಯ ಬಗ್ಗೆ ಹೇಗೆ ಗೊತ್ತಾಗುವುದು. ಆ ಸ್ತ್ರೀ ಹೇಳಿದಳು: ಉಮರ್ ನಮ್ಮ ಕಾರ್ಯಗಳ ಮೇಲ್ನೋಟಗಾರರಾಗಿರುವರು, ಆದರೆ ಅವರು ನಮ್ಮ ಬಗ್ಗೆ ಗಮನಹರಿಸುತ್ತಿಲ್ಲ. ಅಸ್ಲಂ ಹೇಳುತ್ತಾರೆ: ಹಝ್ರತ್ ಉಮರ್(ರ) ಮಕ್ಕ ಮತ್ತು ಮದೀನದ ನಡುವೆ ಅನೇಕ ಛತ್ರಗಳನ್ನು ನಿರ್ಮಿಸಿದ್ದರು. ಅಲ್ಲಿ ಯಾತ್ರಿಕರಿಗೆ ಎಲ್ಲ ಆವಶ್ಯಕ ವಸ್ತುಗಳನ್ನು ಒದಗಿಸಲಾಗಿತ್ತು. ಅವರು ಬೇಗಬೇಗನೇ ನಡೆಯುತ್ತಾ ಧಾನ್ಯಗಳು ಇರುವ ಒಂದು ಗೋದಾಮಿಗೆ ತಲುಪಿದರು. ಅವರು ಒಂದು ಗೋಣಿ ಚೀಲ ಧಾನ್ಯ ಮತ್ತು ಒಂದು ಡಬ್ಬಿ ತುಪ್ಪವನ್ನು ತೆಗೆದುಕೊಂಡು ಅವುಗಳನ್ನು ಅವರ ಹೆಗಲ ಮೇಲೆ ಇರಿಸಲು ಹೇಳಿದರು. ಅಸ್ಲಂ ಹೇಳುತ್ತಾರೆ: ನಿಮ್ಮ ಬದಲಾಗಿ ನಾನು ಅದನ್ನು ಎತ್ತುವೆನು ಎಂದು ನಾನು ಹೇಳಿದೆ. ಆದರೆ ಅವುಗಳನ್ನು ಅವರ ಹೆಗಲಲ್ಲಿ ಇರಿಸಲು ಎರಡು ಮೂರು ಬಾರಿ ಅವರು ಹೇಳಿದರು. ಕೊನೆಗೆ ನಾನು ಇನ್ನೂ ಒತ್ತಾಯಿಸಿದಾಗ ಹಝ್ರತ್ ಉಮರ್(ರ) ನನ್ನೊಡನೆ ಕೇಳಿದರು: ನಿನಗೆ ಒಳ್ಳೆಯದಾಗಲಿ, ಖಿಯಾಮತ್ ದಿನದಂದು ಸಹ ನನ್ನ ಭಾರವನ್ನು ನೀನು ಎತ್ತುವಿಯಾ? ಅನಂತರ ಅವರು ಗೋಣಿಯನ್ನು ಎತ್ತಿ ವೇಗವಾಗಿ ಆ ಹೆಂಗಸಿನ ಬಳಿಗೆ ಮರಳಿ ಹೋದರು. ಚೀಲದಿಂದ ಹಿಟ್ಟನ್ನು ತೆಗೆದರು. ಅದನ್ನು ಮಡಿಕೆಯಲ್ಲಿ ಮೆಲ್ಲಮೆಲ್ಲನೇ ಹಾಕಲು ಹೇಳಿದರು. ಮಡಿಕೆಯಲ್ಲಿ ಇದ್ದ ಆಹಾರ ಬೆಂದು ಬಂದಾಗ ಅದನ್ನು ಒಲೆಯಿಂದ ಕೆಳಗೆ ಇಳಿಸಿದರು. ಯಾವುದಾದರೂ ಪಾತ್ರೆಯನ್ನು ತೆಗೆದುಕೊಂಡು ಬರಲು ಅವರು ಹೇಳಿದರು. ಆ ಮಹಿಳೆ ದೊಡ್ಡದಾದ ಒಂದು ತಟ್ಟೆಯನ್ನು ತಂದರು. ಹಝ್ರತ್ ಉಮರ್(ರ) ಅದರಲ್ಲಿ ಊಟವನ್ನು ಬಡಿಸಿದರು. ನೀನು ಈ ಊಟವನ್ನು ಮಕ್ಕಳಿಗೆ ಕೊಡು, ನಾನು ಅದನ್ನು ತಣ್ಣಗೆ ಮಾಡುತ್ತೇನೆ ಎಂದು ಅವರು ಮಹಿಳೆಯೊಡನೆ ಹೇಳಿದರು. ಮಕ್ಕಳ ಹೊಟ್ಟೆ ತುಂಬುವ ವರೆಗೆ ಹೀಗೆ ಮಾಡುತ್ತಾ ಹೋದರು. ಬಾಕಿಯಿದ್ದ ಆಹಾರವನ್ನು ಅಲ್ಲೇ ಇರಿಸಿದರು. ಅಸ್ಲಂ ಹೇಳುತ್ತಾರೆ: ಅನಂತರ ಅವರು ನಿಂತರು, ನಾನು ಸಹ ಅವರೊಂದಿಗೆ ನಿಂತೆನು. ಆಗ ಆ ಸ್ತ್ರೀ ಹೇಳಿದಳು: ಅಲ್ಲಾಹನು ನಿಮಗೆ ಅತ್ಯುತ್ತಮ ಪ್ರತಿಫಲವನ್ನು ನೀಡಲಿ. ನೀನು ಅಮೀರಲ್ ಮೂಅ್‌ಮಿನೀನ್‌ಗಿಂತ ಪ್ರತಿಫಲ ಪಡೆಯಲು ಹೆಚ್ಚು ಅರ್ಹನಾಗಿರುವೆ. ಆಗ ಹಝ್ರತ್ ಉಮರ್(ರ) ಹೇಳಿದರು: ಒಳ್ಳೆಯ ಮಾತನ್ನು ಹೇಳಿರಿ. ನೀನು ಅಮೀರುಲ್ ಮೂಮಿನೀನ್‌ರ ಬಳಿಗೆ ಹೋದರೆ, ಅಲ್ಲಿ ನೀವು ನನ್ನನ್ನು ಕಾಣುವಿರಿ. ಇನ್‌ಶಾ ಅಲ್ಲಾಹ್. ಹೇಗಿದ್ದರೂ ಅವರು ಒಂದು ಕಡೆಗೆ ಸರಿಯುತ್ತಾ ಆ ಮಹಿಳೆಯ ಎದುರಾಗಿ ಕುಳಿತುಕೊಂಡರು. ಇದಲ್ಲದೆ ಬೇರೆ ಏನಾದರೂ ಕೆಲಸವಿದೆಯೇ ಎಂದು ನಾನು ಕೇಳಿದೆ. ಅವರು ಅದಕ್ಕೆ ಉತ್ತರ ಕೊಡಲಿಲ್ಲ. ನಾನು ಮಕ್ಕಳನ್ನು ನೋಡಿದೆ. ಅವರು ಪರಸ್ಪರ ಆಟವಾಡುತ್ತಿದ್ದರು ಮತ್ತು ನಗಾಡುತ್ತಿದ್ದರು. ಅನಂತರ ಎಲ್ಲ ಮಕ್ಕಳು ಸಮಾಧಾನದಿಂದ ನಿದ್ದೆ ಹೋದರು. ಆಗ ಹಝ್ರತ್ ಉಮರ್(ರ) ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ನಿಂತರು. ನನ್ನನ್ನು ನೋಡುತ್ತಾ ಹೇಳಿದರು: ಹೇ ಅಸ್ಲಂ, ಹಸಿವೆಯ ಕಾರಣದಿಂದ ಈ ಮಕ್ಕಳು ನಿದ್ದೆ ಮಾಡುತ್ತಿರಲಿಲ್ಲ ಮತ್ತು ಅಳುತ್ತಿದ್ದರು. ಅವರನ್ನು ಸಮಾಧಾನದ ಸ್ಥಿತಿಯಲ್ಲಿ ಕಂಡ ನಂತರ ಇಲ್ಲಿಂದ ಹೋಗಲು ನಾನು ಬಯಸಿದೆ. ಹೀಗೆ ಮಕ್ಕಳು ಊಟ ತಯಾರಿಸುವುದರಲ್ಲಿ ಆ ಬಡ ಸ್ತ್ರೀಗೆ ನೆರವಾದರು. ಮಕ್ಕಳು ಹೊಟ್ಟೆ ತುಂಬ ಊಟ ಮಾಡಿ ನಿದ್ದೆ ಹೋಗುವ ತನಕ ಅವರು ಅಲ್ಲೇ ಇದ್ದರು. (ತಾರೀಖ್ ಅತ್ತಿಬರಿ ಲಿಇಬ್ನೆ ಜರೀರ್, ಸಂಪುಟ-2, ಪುಟ-567-568, ದರುಲ್ ಕುತುಬ್ ಇಲ್ಮಿಯ ಬೈರೂತ್ 1987) (ಸಯ್ಯದುನಾ ಉಮರ್‌ಬಿನ್

ಖತ್ತಾಬ್ ಶಖ್ಸಿಯತ್ ಔರ್ ಕಾರ್ನಾಮೆ, ಪುಟ-442, ಮಕ್ತಬಲ್ ಫುರ್ಖಾನ್ ಟ್ರಷ್ಟ್)

ಹಝ್ರತ್ ಮುಸ್ಲಿಹ್ ಮೌಊದ್(ರ) ರವರು ಸಹ ಈ ಘಟನೆಯ ಬಗ್ಗೆ ಹೀಗೆ ಹೇಳುತ್ತಾರೆ ನಿರ್ಗತಿಕರಾದ ಜನರ ಆವಶ್ಯಕತೆಗಳನ್ನು ಪೂರೈಸುವುದು ಇಸ್ಲಾಮಿಕ ಆಡಳಿತದ ಕರ್ತವ್ಯವಾಗಿದೆ. ಇಸ್ಲಾಮಿಕ ಆಡಳಿತದ ಹೊಣೆಗಾರಿಕೆಯನ್ನು ಹೇಳುತ್ತಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಒಂದು ಘಟನೆ ಅದರ ಸತ್ಯಾಂಶವನ್ನು ಮುಂದಿಡುತ್ತದೆ. ಒಮ್ಮೆ ಹಝ್ರತ್ ಉಮರ್(ರ) ಹೊರಗೆ ಮುಸ್ಲಿಮರ ಪರಿಸ್ಥಿತಿಯನ್ನು ವೀಕ್ಷಿಸಲು ಹೋದರು. ಮದೀನದಿಂದ ಮೂರು ಮೈಲುಗಳ ದೂರದಲ್ಲಿರುವ ಮರಾರ್ ಎಂಬ ಜಾಗದಲ್ಲಿದ್ದರು. ನಮ್ಮ ಸಂಶೋದಕರು ಇದು ಮರಾರ್ ಅಲ್ಲ ಬದಲಿಗೆ ಇದು ಸರಾರ್ ಎಂದಾಗಬೇಕು. ಬರಹಗಾರರ ಕಣ್ಣುತಪ್ಪಿನಿಂದ ಮರಾರ್ ಎಂದು ಆಗಿರಬಹುದು ಎಂದು ಹೇಳಿದರು. ಏನೇ ಇರಲಿ ಅಲ್ಲಿ ಒಂದು ಕಡೆಯಿಂದ ಮಕ್ಕಳ ಅಳು ಕೇಳಿ ಬಂತು. ಅಲ್ಲಿ ಹೋಗಿ ನೋಡಿದಗ ಓರ್ವ ಮಹಿಳೆ ಮಡಿಕೆಯನ್ನು ಒಲೆಯಲ್ಲಿ ಇರಿಸಿದ್ದಳು ಮತ್ತು ಎರಡು ಮೂರು ಮಕ್ಕಳು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಆಕೆಯನ್ನು ಅವರು ಕೇಳಿದರು ಏನಾಯಿತು ಎಂದು. ಅದಕ್ಕೆ ಆಕೆ ಹೇಳಿದಳು ಎರಡು ಮೂರು ಹೊತ್ತಿನ ಹಸೀವಿದೆ. ತಿನ್ನಲು ನಮ್ಮ ಬಳಿ ಏನು ಇಲ್ಲ. ಮಕ್ಕಳು ಬಹಳ ಅಳುತ್ತಿದ್ದರು ಎಂದು ನಾನು ಖಾಲಿ ಮಡಿಕೆಯನ್ನು ಒಲೆಯ ಮೇಳಿರಿಸಿದ್ದೇನೆ ಹೀಗೆ ಮಾಡಿದರೆ ಅವರು ಊಟ ತಯಾರಾಗುತ್ತಿದೆ ಎಂದು ಸಾಮಾಧಾನವಾಗಿರುವರು ಮತ್ತು ಮಲಗುವರು ಎಂದು. ಹಝ್ರತ್ ಉಮರ್(ರ) ರವರು ಈ ಮಾತುಗಳನ್ನು ಆಲಿಸಿ ತಕ್ಷಣವೇ ಮದೀನಕ್ಕೆ ಹೋಗಿ ಹಿಟ್ಟು, ತುಪ್ಪ, ಮಾಂಸ ಮತ್ತು ಖರ್ಜೂರಗಳನ್ನು ಒಂದು ಚೀಲದಲ್ಲಿ ಹಾಕಿ ತನ್ನ ಸೇವಕನ್ನು ಹೇಳಿದರು ಇದನ್ನು ನನ್ನ ಬೆನ್ನಿನ ಮೇಲಿಡಿ. ಆತನು ಹೇಳಿದನು ಹುಝೂರ್ ನಾನು ಇರುವಾಗ ನೀವೇಕೆ ಹೊತ್ತಿಕೊಳ್ಳುವಿರಿ. ಇದಕ್ಕೆ ಹಝ್ರತ್ ಉಮರ್(ರ) ಹೇಳಿದರು ನಿಸ್ಸಂದೇಹವಾಗಿಯೂ ನೀನು ಈ ಸಂದರ್ಭದಲ್ಲಿ ನನ್ನ ಭಾರವನ್ನು ಹೊತ್ತಿಕೊಳ್ಳವೆ ಆದರೆ ಖಿಯಾಮತ್ ದಿವಸ ನೀನು ನನ್ನ ಭಾರ ಹೊತ್ತುವೆಯಾ!! ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಿರ್ಗತಿಕರಿಗೆ ಪಿಂಚಣಿಗಳನ್ನು ಕೊಡಲಾಗುತ್ತವೆ. ನಿರ್ಗತಿಕರಾದ ಜನರ ಆವಶ್ಯಕತೆಗಳನ್ನು ಪೂರೈಸುವುದು ಇಸ್ಲಾಮಿಕ ಆಡಳಿತದ ಕರ್ತವ್ಯವಾಗಿದೆ. ನಿರ್ಗತಿಕರಿಗೆ ಪಿಂಚಣಿಗಳನ್ನು ನೀಡುವುದು ಅವರು ಸೋಮಾರಿ ಮತ್ತು ಆಲಸಿಗರಾಗಲಿಕ್ಕಲ್ಲ. ಬಡವರನ್ನು ಸಹಾಯ ಮಾಡಲು ಇಸ್ಲಾಂ ಆದೇಶಿಸುವುದರೊಂದಿಗೆ, ಭಿಕ್ಷೆ ಬೇಡುವುದರಿಂದ ಜನರನ್ನು ತಡೆಯುತ್ತದೆ. ಭಿಕ್ಷೆ ಬೇಡುವುದನ್ನು ತಡೆಯಲು ಹಝ್ರ‌ತ್ ಉಮರ್(ರ) ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಬೇಡುವವನು ಆರೋಗ್ಯವಂತನಾಗಿದ್ದರೆ, ಅವರು ಬಹಳ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರು. ಒಂದು ಬಾರಿ ಹಝ್ರ‌ತ್ ಉಮರ್(ರ) ಒಬ್ಬ ಭಿಕ್ಷುಕನನ್ನು ಕಂಡರು. ಅವನ ಜೋಳಿಗೆ ತುಂಬ ಹಿಟ್ಟು ಇತ್ತು. ಆದರೂ ಭಿಕ್ಷೆ ಬೇಡುತ್ತಿದ್ದನು. (ಅಹ್ಮದೀಯತ್ ಯಾನಿ ಹಖೀಖಿ ಇಸ್ಲಾಮ್, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-296-297)

ಹಝ್ರ‌ತ್ ಉಮರ್(ರ) ಅವನಿಂದ ಹಿಟ್ಟನ್ನು ಕಸಿದುಕೊಂಡು ಒಂಟೆಗಳಿಗೆ ಹಾಕಿ ಕೊಟ್ಟರು ಮತ್ತು "ಇನ್ನು ನೀ ಭಿಕ್ಷೆ ಬೇಡು" ಎಂದು ಅವನೊಡನೆ ಹೇಳಿದರು. ಭಿಕ್ಷೆ ಬೇಡುವವರನ್ನು ಕೆಲಸ ಮಾಡಲು ಒತ್ತಾಯಿಸಲಾಗುತ್ತಿತ್ತು. ಆರೋಗ್ಯವಂತರಾಗಿದ್ದುಕೊಂಡು ಭಿಕ್ಷೆ ಬೇಡುವ ಆವಶ್ಯಕತೆ ಏನೆಂದು ಕೇಳುತ್ತಿದ್ದರು. ಪರಿಶ್ರಮಪಡು, ಸಂಪಾದಿಸು, ಮತ್ತು ತಿನ್ನು ಎಂಬ ಪಾಠವನ್ನು ನೀಡಿದರು. ಪುನಃ ಭಿಕ್ಷೆ ಬೇಡಿದರೆ ನಿನ್ನಿಂದ ಕಸಿದು ಪುನಃ ಜಾನುವಾರುಗಳಿಗೆ ನೀಡಲಾಗುವುದು ಎಂದು ಪಾಠ ಹೇಳಿಕೊಟ್ಟರು. ಹೇಗಿದ್ದರೂ ಭಿಕ್ಷೆ ಬೇಡುವುದನ್ನು ಇಸ್ಲಾಂ ಕಠಿಣವಾಗಿ ವಿರೋಧಿಸುತ್ತದೆ. ಈ ಘಟನೆಯನ್ನು ಇನ್ನೊಂದೆಡೆ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರ‌ತ್ ಉಮರರ(ರ) ಗಾಂಭೀರ್ಯ ಮತ್ತು ವೈಭವಕ್ಕೆ ಭಯಪಟ್ಟು ರೋಮ್ ಮತ್ತು ಪೇರ್ಶಿಯದ ಆಡಳಿತಗಳು ನಡುಗುತ್ತಿದ್ದುವು. ಆದರೆ ಗ್ರಾಮವಾಸಿಯಾದ ಒಬ್ಬಳು ಹೆಂಗಸಿನ ಮಕ್ಕಳು ಹಸಿವೆಯಿಂದ ಇರುವುದನ್ನು ನೋಡಿದಾಗ ಅಂತಹ ವ್ಯಕ್ತಿಯಾದ ಹಝ್ರ‌ತ್ ಉಮರ್(ರ) ತಳಮಳಗೊಳ್ಳುತ್ತಾರೆ. ತನ್ನ ಹೆಗಲ ಮೇಲೆ ಹಿಟ್ಟಿನ ಗೋಣಿಯನ್ನು ಎತ್ತಿಕೊಂಡು, ತುಪ್ಪದ ಡಬ್ಬಿಯನ್ನು ಕೈಯಲ್ಲಿ ಎತ್ತಿಕೊಂಡು ಅವರ ಬಳಿಗೆ ಹೋಗುತ್ತಾರೆ. ಆ ಮಕ್ಕಳನ್ನು ತಿನ್ನಿಸಿ, ಅವರೆಲ್ಲರೂ ನಿದ್ದೆ ಹೋಗುವ ತನಕ ಅಲ್ಲಿಂದ ಮರಳಿ ಬರುವುದಿಲ್ಲ. (ಸೇರೆ ರೂಹಾನಿ(6) ಅನ್ವಾರುಲ್ ಉಲೂಮ್, ಸಂಪುಟ-22, ಪುಟ-596)

ಹಝ್ರ‌ತ್ ಉಮರ್(ರ) ಸ್ವತಂತ್ರಗೊಳಿಸಿದ ಈ ಗುಲಾಮನಾದ ಅಸ್ಲಂ ಮತ್ತೊಂದು ಘಟನೆಯನ್ನು ವಿವರಿಸುತ್ತಾರೆ: ಒಂದು ಬಾರಿ ವ್ಯಾಪಾರಿಗಳ ಒಂದು ಸಂಘ ಮದೀನಕ್ಕೆ ಬಂದರು. ಅವರು ಈದ್‌ಗಾಹ್‌ನಲ್ಲಿ ತಂಗಿದರು. ಹಝ್ರ‌ತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರನ್ನು ಜೊತೆಗೆ ಸೇರಿಸಿಕೊಂಡು ಹಝ್ರ‌ತ್ ಉಮರ್(ರ) ಆ ವ್ಯಾಪಾರಿ ತಂಡಕ್ಕೆ ಸಂರಕ್ಷಣೆ ನೀಡಲು ಹೊರಟರು. ಹೀಗೆ ರಾತ್ರಿ ಪೂರ್ತಿ ಅವರಿಗೆ ಕಾವಲು ನೀಡುತ್ತಾ ಆರಾಧನೆ ಮಾಡುತ್ತಾ ಕಳೆದರು. ಹೀಗಿರುವಾಗ ಅತ್ಯಂತ ಸಣ್ಣದಾದ ಒಂದು ಮಗುವಿನ ಅಳು ಅವರಿಗೆ ಕೇಳಿಬಂತು. ಅವರು ಅತ್ತ ಕಡೆಗೆ ಹೋದರು ಮತ್ತು ಅಲ್ಲಾಹನ ಭಯವಿರಿಸಲು ಮತ್ತು ಮಗುವನ್ನು ಚೆನ್ನಾಗಿ ನೋಡಿಕೊಳ್ಳಲು ತಾಯಿಯೊಡನೆ ಹೇಳಿದರು. ಆದರೆ ಮಗುವಿನ ಅಳು ರಾತ್ರಿ ಪೂರ್ತಿ ಕೇಳಿಬರುತ್ತಿತ್ತು. ಬೆಳಿಗ್ಗೆ ಆಗುತ್ತಲೇ ಹಝ್ರ‌ತ್ ಉಮರ್(ರ) ಆ ಹೆಂಗಸಿನ ಡೇರೆಗೆ ಹೋದರು. ಮಗು ಅಳುವುದಕ್ಕೆ ಕಾರಣವೇನೆಂದು ಕೇಳಿದರು. ಆ ಸ್ತ್ರೀ ಹೇಳಿದಳು: ನಾನು ಇವನಿಗೆ ಹಾಲಿನ ಬದಲಿಗೆ ಇತರ ಆಹಾರವನ್ನು ನೀಡಲು ಪ್ರಯತ್ನಿಸುತ್ತಿದ್ದೇನೆ. ಆದರೆ ಇವನು ಹಾಲನ್ನೇ ಕೇಳುತ್ತಿದ್ದಾನೆ. ಹಾಗೆ ಏಕೆ ಮಾಡುತ್ತಿದ್ದೀಯ ಎಂದು ಅವರು ಕೇಳಿದರು. ಆಗ ಆ ಹೆಂಗಸು ಹೇಳಿದಳು: ಹಾಲು ಕುಡಿಯುವುದನ್ನು ಬಿಟ್ಟಿರುವ ಮಕ್ಕಳಿಗೆ ಮಾತ್ರ ಉಮರ್ ಪಿಂಚಣಿ ನಿಶ್ಚಯಿಸಿರುವರು. ಆಗ ಮಗುವಿನ ವಯಸ್ಸು ಎಷ್ಟೆಂದು ಕೇಳಿದ ನಂತರ ಹಝ್ರ‌ತ್ ಉಮರ್(ರ) ಹೇಳಿದರು: ಹಾಲನ್ನು ಇಷ್ಟು ಬೇಗ ಬಿಡಿಸಬೇಡ. ಆ ದಿನದಂದು ಉಮರ್(ರ) ಜನರಿಗೆ ಫಜ್ರ್ ನಮಾಝಿನ ಇಮಾಮತ್ ವಹಿಸಿದರು. ಅವರು ಅಳುತ್ತಿದ್ದ ಕಾರಣದಿಂದ ಅವರು ಓದುವುದು ಸ್ಪಷ್ಟವಾಗುತ್ತಿರಲಿಲ್ಲ. ಹಝ್ರ‌ತ್ ಉಮರ್(ರ) ಸ್ವತಃ ಹೀಗೆ ಹೇಳುತ್ತಿದ್ದರು: ಹೇ ಉಮರ್, ನೀನು ಎಷ್ಟು ಕೆಟ್ಟವನು, ನೀನು ಎಷ್ಟೆಲ್ಲ ಮುಸ್ಲಿಂ ಮಕ್ಕಳನ್ನು ಕೊಂದಿದ್ದೀಯ. ಅನಂತರ ಹಝ್ರ‌ತ್ ಉಮರ್(ರ) ಘೋಷಣೆ ಮಾಡಿಸಿದರು ಮತ್ತು ದೇಶದೆಲ್ಲಡೆ ಹೀಗೆ ಅಪ್ಪಣೆ ನೀಡಿದರು: ಮಕ್ಕಳಿಂದ ಬೇಗನೇ ಹಾಲು ಬಿಡಿಸಬೇಕಾಗಿಲ್ಲ. ಹುಟ್ಟಿದ ಪ್ರತಿಯೊಂದು ಮಗುವಿಗೂ ನಾವು ಪಿಂಚಣಿಯನ್ನು ನಿಶ್ಚಯಿಸುತ್ತೇವೆ. (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್, ಸಂಪುಟ-10, ಪುಟ-185-186, ದಾರುಲ್ ಹಿಜರ್ 1998)

ಈ ಘಟನೆಯನ್ನು ಹಝ್ರತ್ ಮೊಸ್ಲೆಹ್ ಮೌಊದ್(ರ) ರವರು ತಮ್ಮದೇ ಆದ ರೀತಿಯಲ್ಲಿ ನಿರೂಪಿಸಿದ್ದಾರೆ: "ಆರಂಭದಲ್ಲಿ, ಹಝ್ರತ್ ಉಮರ್(ರ) ರವರು ಎದೆಹಾಲು ಕುಡಿಯುತ್ತಿದ್ದ ಮಕ್ಕಳಿಗೆ ಯಾವುದೇ ಭತ್ಯೆಯನ್ನು ಸೂಚಿಸಿರಲಿಲ್ಲ, ಆದರೆ ನಂತರ ಅವರು ಹಾಳು ಕುಡಿಯುವ ಮಕ್ಕಳ ಹಕ್ಕನ್ನು ಒಪ್ಪಿಕೊಂಡು ಅವರ ಪಾಲನ್ನು ಅವರ ತಾಯಂದಿರಿಗೆ ನೀಡಿರಿ ಎಂದು ಆದೇಶಿಸಿದರು. ಈ ಮೊದಲು, ಹಝ್ರತ್ ಉಮರ್(ರ) ಅವರು ಮಗು ಹಾಲು ಕುಡಿಯುವವರೆಗೂ ಖೌಮಿನ ಅಸ್ತಿತ್ವದಲ್ಲಿ ಭಾಗವಹಿಸುವುದಿಲ್ಲ ಆದ್ದರಿಂದ ಆ ಮಗುವಿನ ಹೊಣೆ ತಾಯಿಯ ಮೇಲಿದೆ ಸಾರ್ವಜನಿಕರ ಮೇಲೆ ಇಲ್ಲ ಬೈತುಲ್ ಮಾಲ್(ಖಜಾನೆಯಿಂದ) ಆತನ ವ್ಯಚ್ಛ ನೀಡಲಾಗುವುದಿಲ್ಲ ಎಂದು ಭಾವಿಸುತ್ತಿದ್ದರು. ಆದರೆ ಒಮ್ಮೆ ಹಝ್ರತ್ ಉಮರ್(ರ) ರವರು ವಾಯುವಿಹಾರಕ್ಕಾಗಿ ಹೊರಟರು. ಒಂದು ಬುಡಕಟ್ಟು ಜನಾಂಗದ ತಂಡವು ಊರಿನ ಹೊರವಲಯದಲ್ಲಿ ಬಂದು ಇಳಿದಿತ್ತು. ಹಝ್ರತ್ ಉಮರ್(ರ) ಒಂದು ಡೇರೆಯಿಂದ ಮಗುವಿನ ಅಳುವ ಶಬ್ದ ಕೇಳಿಸಿತು. ಮಗು ಕಿರುಚುತ್ತಿತ್ತು ಮತ್ತು ತಾಯಿ ಅವನನ್ನು ಮಲಗಿಸಲು ಪ್ರಯತ್ನಿಸುತ್ತಿದ್ದಳು. ಸ್ವಲ್ಪ ಸಮಯದವರೆಗೆ ಆಕೆಯು ಆ ಮಗುವಿಗೆ ಮಲಗಿಸಲು ಪ್ರಯತ್ನಿಸಿದಳು ಆದರೂ ಮಗು ಮಲಗದಿದ್ದಾಗ, ತಾಯಿ ಮಗುವಿಗೆ ಕಪಾಳಮೋಕ್ಷ ಮಾಡಿದಳು. ಉಮರ್‌ನ ಆತ್ಮಕ್ಕಾಗಿ ಅಳು ಎಂದು ಹೇಳಿದಳು. ಹಝ್ರತ್ ಉಮರ್(ರ) ಈ ಮಾತನ್ನು ಆಲಿಸಿ ಆಶ್ಚರ್ಯ ಪಡ್ಡರು ಇದರಿಂದ ನನಗೆ ಸಂಬಂಧವೇನಿದೆ? ಎಂದು. ಹಝ್ರತ್ ಉಮರ್(ರ) ಆ ಡೇರೆಯನ್ನು ಪ್ರವೇಶಿಸಲು ಈ ಮಹಿಳೆಯ ಅನುಮತಿ ತೆಗೆದುಕೊಂಡು ಒಳಗೆ ಹೋಗಿ ಆ ಮಹಿಳೆಯನ್ನು ಕೇಳಿದರು ಬೀಬಿ! ಏನು ವಿಳಯ? ಆಕೆಗೆ ಹಝ್ರತ್ ಉಮರ್(ರ) ಗೊತ್ತಿಲ್ಲದ ಕಾರಣ ಅವಳು ಹೇಳಿದಳು: ಉಮರ್ ಎಲ್ಲರಿಗೂ ಪರಿಹಾರವನ್ನು ನಿಗದಿಪಡಿಸಿದ್ದಾನೆ, ಆದರೆ ಹಾಲುಣಿಸುವ ಶಿಶುಗಳಿಗೆ ಸಹ ಆಹಾರದ ಅವಶ್ಯಕತೆಯಿದೆ ಎಂದು ಅವರಿಗೆ ತಿಳಿದಿಲ್ಲ. ಈಗ ನನಗೆ ಸಾಕಳ್ಟು ಹಾಲು ಇಲ್ಲ ಮತ್ತು ನಾನು ನನ್ನ ಈ ಕೂಸನ್ನು ಹಾಲುಣಿಸುವದನ್ನು ನಿಲ್ಲಿಸಿದ್ದೇನೆ ಆದ್ದರಿಂದ ಆ ಕೂಸಿನ ಭತ್ಯೆಯನ್ನು ನಿಗದಿಡಿಸಬಹುದು ಎಂದು. ಆ ಸಮಯದಲ್ಲಿ ಹಝ್ರತ್ ಉಮರ್(ರ)ರವರು ಹಿಂತಿರುಗಿ ತನ್ನ ಖಜಾನೆಯಿಂದ ಒಂದು ಚೀಲ ಹಿಟ್ಟನ್ನು ತೆಗೆದುಕೊಂಡು ನಡೆಯಲು ಪ್ರಾರಂಭಿಸಿದರು. ಖಜಾನೆಗೆ ನಿಯೋಜಿಸಲ್ಪಟ್ಟ ವ್ಯಕ್ತಿ ಮುಂದೆ ಹೋಗಿ ನಾವು ಅದನ್ನು ಎತ್ತಿಕೊಂಡು ಹೋಗುತ್ತೇವೆ ಎಂದು ಹೇಳಿದರು. ಹಝ್ರತ್

ಉಮರ್(ರ) ಅವನಿಗೆ, "ನನ್ನನ್ನು ಬಿಟ್ಟುಬಿಡಿ, ನಾನು ಅದನ್ನು ತೆಗೆದುಕೊಳ್ಳುತ್ತೇನೆ" ಎಂದು ಹೇಳಿದರು. ಖಿಯಾಮತ್(ಪುನರುತ್ಥಾನ) ದಿನದಂದು ನಾನಗೆ ಹೊಡೆದಾಗ, ನನ್ನ ಸ್ಥಳದಲ್ಲಿ ನೀವು ಉತ್ತರಿಸುತ್ತೀರಾ? ನನ್ನ ಮೂಲಕ ಎಷ್ಟು ಮಕ್ಕಳು ಈ ರೀತಿ ಸತ್ತಿದ್ದಾರೆಂದು ನನಗೆ ತಿಳಿದಿಲ್ಲ. ಅದರ ನಂತರ, ಹಾಲುಣಿಸುವ ಮಕ್ಕಳಿಗೆ ಪಿಂಚಣಿಯನ್ನು ಸಹ ನಿಗದಿಪಡಿಸಬೇಕು ಎಂದು ಹಝ್ರತ್ ಒಮರ್ ಆದೇಶಿಸಿದರು. (ಖುತ್‌ಬಾತ್ ಮಹಮೂದ್, ಸಂಪುಟ–27 ಪುಟ–353)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ "ಹದೀಸಿನಲ್ಲಿ ಅಮ್ಮಾರ್ ಬಿನ್ ಖುಝೀಮರಿಂದ ಹೀಗೆ ವರದಿಯಾಗಿದೆ: ಹಝ್ರತ್ ಉಮರ್(ರ) ನನ್ನ ತಂದೆಯೊಡನೆ ಕೇಳಿದರು: ನೀವು ನಿಮ್ಮ ತೋಟದಲ್ಲಿ ಈಗ ಗಿಡಗಳನ್ನು ಏಕೆ ನೆಡುತ್ತಿಲ್ಲ. ಅವರು ಇನ್ನು ಹೆಚ್ಚಿನ ಮರಗಳನ್ನು ನೆಡುತ್ತಿರಲಿಲ್ಲ. ತೋಟವನ್ನು ಬೆಳಸುತ್ತಿರಲಿಲ್ಲ. ಕೆಟ್ಟ ಗಿಡಗಳ ಜಾಗದಲ್ಲಿ ಹೊಸ ಗಿಡಗಳನ್ನು ನೆಡುತ್ತಿರಲಿಲ್ಲ. ನನ್ನ ತಂದೆ ಹೇಳಿದರು: ನನಗೆ ವಯಸ್ಸಾಗಿದೆ. ನಾಳೆ ಮೃತಪಡುವೆನು. ಈಗ ಗಿಡಗಳನ್ನು ನೆಡುವುದರಿಂದ ನನಗೇನು ಪ್ರಯೋಜನ. ಆಗ ಹಝ್ರತ್ ಉಮರ್(ರ) ಹೇಳಿದರು: ನೀವು ಖಂಡಿತವಾಗಿಯೂ ಗಿಡಮರಗಳನ್ನು ನೆಡಬೇಕು. ಅನಂತರ ಹಝ್ರತ್ ಉಮರ್(ರ) ನನ್ನ ತಂದೆಯೊಡನೆ ಸೇರಿಕೊಂಡು ತೋಟದಲ್ಲಿ ಗಿಡಗಳನ್ನು ನೆಡುತ್ತಿದ್ದರು. (ಮಲ್‌ಫೂಝಾತ್, ಸಂಪುಟ–2, ಪುಟ–92)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಈ ಘಟನೆಯನ್ನು ಆಲಸಿತನದಿಂದ ಉಳಿದುಕೊಳ್ಳಬೇಕು ಎಂಬುದರ ಬಗ್ಗೆ ವಿವರಿಸಿದ್ದಾರೆ ಮತ್ತು ಹಿಂದಿನ ಜನಾಂಗದವರು ನೆಟ್ಟಿದ ಗಿಡಗಳ ಹಣ್ಣನ್ನು ನೀವು ತಿನ್ನುತ್ತಿದ್ದೀರಿ ಹೀಗೆ ಮುಂದಿನ ಸಂತಾನಕ್ಕಾಗಿ ಗಿಡಗಳನ್ನು ಬಿಟ್ಟಿ ಹೋಗಿ ಎಂದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ರಾತ್ರಿ ಹಝ್ರತ್ ಉಮರ್(ರ) ಸುತ್ತಾಡುತ್ತಿದ್ದರು. ಒಬ್ಬಳು ಸ್ತ್ರೀ ಪ್ರೇಮಗೀತೆ ಹಾಡುತ್ತಿರುವುದನ್ನು ಕಂಡರು. ಆ ಮಹಿಳೆಯ ಪತಿ ಸೈನ್ಯದಲ್ಲಿ ಇರುವರು ಮತ್ತು ದೀರ್ಘಕಾಲದಿಂದ ಹೊರಗೆ ಇರುವರು ಎಂದು ಇದರ ಕುರಿತು ಹಝ್ರತ್ ಉಮರ್(ರ) ತನಿಖೆ ನಡೆಸಿದಾಗ ಗೊತ್ತಾಯಿತು. ಹಝ್ರತ್ ಉಮರ್(ರ) ಆ ಸ್ತ್ರೀಯೊಡನೆ ಹೇಳಿದರು: ನಿನ್ನ ಗಂಡನಿಗೆ ಈಗ ಪತ್ರವನ್ನು ಕಳುಹಿಸುತ್ತೇನೆ. ಹೀಗೆ ದೂತರನ್ನು ಕಳುಹಿಸಿ ಗಂಡನನ್ನು ಮರಳಿ ತರಲು ಹೇಳಿದರು. ಅನಂತರ ಹೀಗೆ ಆದೇಶ ನೀಡಿದರು: ಯಾವನೇ ಸಿಪಾಯಿ ನಾಲ್ಕು ತಿಂಗಳಿಗಿಂತ ಹೆಚ್ಚು ಕಾಲ ಹೊರಗೆ ಇರಬಾರದು, ಯಾವನಾದರೂ ಸಿಪಾಯಿ ದೀರ್ಘಕಾಲ ಹೊರಗೆ ಇರಲು ಬಯಸುವುದಾದರೆ, ತನ್ನ ಪತ್ನಿ ಮಕ್ಕಳನ್ನು ತನ್ನೊಂದಿಗೆ ಕೊಂಡು ಹೋಗಬೇಕು. (ಖುತ್ಬಾತ್ ಮಹ್ಮೂದ್, ಸಂಪುಟ–4, ಪುಟ–63, ವರ್ಷ 1914)

ಅಸ್ಲಮ್, ಹಝ್ರತ್ ಉಮರ್(ರ) ರವರು ಸ್ವತಂತ್ರಗೊಳಿಸಿದ ಗುಲಾಮ ಹೇಳಿದರು: ಒಂದು ರಾತ್ರಿ ಹಝ್ರತ್ ಉಮರ್(ರ) ಮದೀನದ ಹೊರಗಿನ ಭಾಗದಲ್ಲಿ ಇದ್ದರು. ಸ್ತ್ರೀಯೊಬ್ಬಳು ಹೆರಿಗೆಯ ನೋವಿನ ಕಾರಣದಿಂದ ಕಿರುಚುತ್ತಿರುವ ಶಬ್ದ ಒಂದು ಡೇರೆಯಿಂದ ಕೇಳಿಬರುತ್ತಿತ್ತು. ಹಝ್ರತ್ ಉಮರ್(ರ) ಆ ಮಹಿಳೆಯ ಸ್ಥಿತಿಯ ಬಗ್ಗೆ ಕೇಳಿದರು. ಅವಳು ಹೇಳಿದಳು: ನಾನು ಪರದೇಶಿ ಮತ್ತು ಯಾತ್ರಿಕಳಾಗಿದ್ದೇನೆ. ನನ್ನ ಬಳಿ ಏನೂ ಇಲ್ಲ. ಇದನ್ನು ಕೇಳಿದಾಗ ಹಝ್ರತ್ ಉಮರ್(ರ) ತನ್ನ ಮನೆಗೆ ಮರಳಿ ಹೋದರು ಮತ್ತು ತನ್ನ ಪತ್ನಿಯಾದ ಹಝ್ರತ್ ಉಮ್ಮೇ ಕುಲ್ಸುಮ್ ಬಿನ್ತ್ ಅಲಿಯಿಂದ ಬಾಣಂತಿಗೆ ಆವಶ್ಯವಾದ ವಸ್ತುಗಳನ್ನು ಪಡೆದರು. ಅದೇ ರೀತಿಯಲ್ಲಿ ಹಿಟ್ಟು ಮತ್ತು ಎಣ್ಣೆ ಇತ್ಯಾದಿಗಳನ್ನು ತೆಗೆದುಕೊಂಡು ಆ ಮಹಿಳೆಯ ಬಳಿಗೆ ಹೋದರು. ಹಝ್ರತ್ ಉಮರ್(ರ) ಆ ಮಹಿಳೆಯ ಪತಿಯೊಂದಿಗೆ ಹೊರಗೆ ಕುಳಿತುಕೊಂಡರು. ಹಝ್ರತ್ ಉಮ್ಮೇ ಕುಲ್ಸುಂ ಬಂದು ಹೇಳಿದರು: ಹೇ ಅಮೀರಲ್ ಮೂಅ್‌ಮಿನೀನ್, ನಿಮ್ಮ ಸಂಗಡಿಗನಿಗೆ ಗಂಡು ಮಗುವಿನ ಶುಭವಾರ್ತೆಯನ್ನು ನೀಡಿರಿ. ಅಮೀರಲ್ ಮೂಅ್‌ಮಿನೀನ್ ಎಂದು ಕರೆಯುವುದನ್ನು ಕೇಳಿದಾಗ ಮಾತ್ರವೇ ಅವರು ಹಝ್ರತ್ ಉಮರ್(ರ) ಆಗಿದ್ದರು ಎಂದು ಆ ವ್ಯಕ್ತಿಗೆ ಗೊತ್ತಾದದ್ದು. ಅವರು ಹಝ್ರತ್ ಉಮರ್‌ರೊಡನೆ ಕ್ಷಮೆ ಕೇಳಿದರು. ತೊಂದರೆಯಿಲ್ಲವೆಂದು ಹಝ್ರತ್ ಉಮರ್(ರ) ಹೇಳಿದರು. ಅನಂತರ ಹಝ್ರತ್ ಉಮರ್(ರ) ಅವರಿಗೆ ಖರ್ಚು ಮತ್ತು ಆವಶ್ಯಕ ಸಾಮಾನುಗಳನ್ನು ಒದಗಿಸಿಕೊಟ್ಟರು. (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್, ಸಂಪುಟ–10, ಪುಟ–186, ದಾರುಲ್ ಹಿಜರ್ 1998)

ಸಈದ್ ಬಿನ್ ಮುಸಯ್ಯಬ್ ಮತ್ತು ಅಬೂ ಸಲ್ಮಾ ಬಿನ್ ಅಬ್ದುರ್ರಹ್ಮಾನ್ ಹೇಳುತ್ತಾರೆ: ಅಲ್ಲಾಹನಾಣೆ, ಹಝ್ರತ್ ಉಮರ್(ರ) ಹೇಳಿದ್ದನ್ನೆಲ್ಲ ಈಡೇರಿಸುತ್ತಿದ್ದರು. ಕಠಿಣತೆ ತೋರಿಸಬೇಕಾದಲ್ಲಿ ಕಠಿಣವಾಗಿ ವರ್ತಿಸುತ್ತಿದ್ದರು ಮತ್ತು ಸೌಮ್ಯವಾಗಿ ವರ್ತಿಸಬೇಕಾದ ಸಂದರ್ಭಗಳಲ್ಲಿ ಸೌಮ್ಯವಾಗಿ ವರ್ತಿಸುತ್ತಿದ್ದರು. ಅವರು ಜನರ ಮಕ್ಕಳ ತಂದೆಯಾಗಿದ್ದರು. ಗಂಡನು ಹೊರಗೆ ಇರುವ ಪತ್ನಿಯರ ಬಳಿಗೆ ಹೋಗುತ್ತಿದ್ದರು. ಅವರ ಬಾಗಿಲ ಬಳಿಗೆ ತಲುಪಿಕೊಂಡು ಅವರಿಗೆ ಸಲಾಂ ಹೇಳುತ್ತಿದ್ದರು. ಖರೀದಿ ಮಾಡುವಾಗ ನೀವು ಮೋಸಕ್ಕೆ ಒಳಪಡುವುದು ನನಗೆ ಇಷ್ಟವಲ್ಲ. ಆದ್ದರಿಂದ ಆವಶ್ಯಕ ವಸ್ತುವೇನಾದರೂ ಇದ್ದರೆ ಅದನ್ನು ಖರೀದಿ ಮಾಡಿಕೊಡುವುದಾಗಿ ಹೇಳುತ್ತಿದ್ದರು. ಹೀಗೆ ಮಹಿಳೆಯರು ಅವರ ಮಕ್ಕಳನ್ನು ಹಝ್ರತ್ ಉಮರ್‌ರೊಂದಿಗೆ(ರ) ಕಳುಹಿಸುತ್ತಿದ್ದರು. ಅವರು ಮಾರುಕಟ್ಟೆಗೆ ಹೋಗುವಾಗ ಅವರ ಹಿಂದೆ ಅಸಂಖ್ಯ ಮಕ್ಕಳು ಇರುತ್ತಿದ್ದರು. ಅನಂತರ ಅವರು ಪ್ರತಿಯೊಬ್ಬರಿಗೂ ಆವಶ್ಯಕ ವಸ್ತುಗಳನ್ನು ಖರೀದಿ ಮಾಡಿ ಕೊಡುತ್ತಿದ್ದರು. ಮಕ್ಕಳ ಇಲ್ಲದ ಮಹಿಳೆಯರಿಗೆ ಸ್ವತಃ ಖರೀದಿ ಮಾಡಿ ಕೊಡುತ್ತಿದ್ದರು. ಯಾವುದಾದರೂ ಸೈನ್ಯದಿಂದ ಯಾವನಾದರೂ ದೂತನು ಬಂದರೆ, ಅವರಿಂದ ಸ್ತ್ರೀಯರ ಪತಿಯಂದಿರ ಪತ್ರಗಳನ್ನು ಸ್ವತಃ ತಲುಪಿಸುತ್ತಿದ್ದರು. ಅವರೊಡನೆ ಹೀಗೆ ಹೇಳುತ್ತಿದ್ದರು: ನಿಮ್ಮ ಪತಿ ಅಲ್ಲಾಹನ ಮಾರ್ಗದಲ್ಲಿ ಹೋಗಿರುವರು. ನೀವಾದರೋ ಹಝ್ರತ್ ಪೈಗಂಬರರ(ಸ) ಪಟ್ಟಣದಲ್ಲಿ ಇದ್ದೀರಿ. ನಿಮ್ಮ ಬಳಿ ಪತ್ರ ಓದಲು ಯಾರಾದರೂ ಇದ್ದರೆ ಸರಿ, ಇಲ್ಲದಿದ್ದರೆ ನೀವು ಬಾಗಿಲ ಬಳಿ ನಿಲ್ಲಿರಿ. ನಾವು ನಿಮಗೆ ಪತ್ರವನ್ನು ಓದಿ ಹೇಳುವೆನು. ನಮ್ಮ ದೂತ ಇಂತಿಂತಹ ದಿನಗಳಲ್ಲಿ ಇಲ್ಲಿಗೆ ಬರುವರು. ನೀವು ಪತ್ರ ಬರೆದರೆ ನಿಮ್ಮ ಪತ್ರಗಳನ್ನು ಅವರ ಕೈಯಲ್ಲಿ ಕಳುಹಿಸಬಹುದಾಗಿದೆ. ಅದೇ ರೀತಿಯಲ್ಲಿ ಎಲ್ಲ ಮಹಿಳೆಯರ ಬಳಿಗೆ ಪತ್ರ ಬರೆಯಲು ಬೇಕಾದ ಕಾಗದ ಮತ್ತು ಮಸಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಪತ್ರ ಬರೆದವರಿಂದ ಪತ್ರವನ್ನು ಪಡೆಯುತ್ತಿದ್ದರು. ಪತ್ರ ಬರೆಯಲು ಗೊತ್ತಿಲ್ಲದವರಿಗೆ ಸ್ವತಃ ಬರೆದು ಕೊಡಲಿಕ್ಕಾಗಿ ಹೀಗೆ ಹೇಳುತ್ತಿದ್ದರು: ಇದು ಕಾಗದ ಮತ್ತು ಮಸಿಯಾಗಿದೆ. ನೀವು ಬಾಗಿಲ ಬಳಿಗೆ ಬನ್ನಿರಿ. ಏನು ಬರೆಯಬೇಕೆಂದು ಹೇಳಿಕೊಡಿರಿ ಎಂದು ಹೇಳುತ್ತಿದ್ದರು. ಹೀಗೆ ಅವರು ಪ್ರತಿಯೊಬ್ಬರ ಬಾಗಿಲಿಗೆ ಹೋಗಿಕೊಂಡು ಅವರ ಪತಿಯಂದಿರಿಗೆ ಅವರ ಕಡೆಯಿಂದ ಪತ್ರ ಬರೆಯುತ್ತಿದ್ದರು ಮತ್ತು ಅವುಗಳನ್ನು ಕಳುಹಿಸುತ್ತಿದ್ದರು. (ಇಝಾಲತುಲ್ ಖುಲಫಾ ಅನ್ ಖಿಲಾಫ಼ತುಲ್ ಖುಲಫಾ, ಶಾಹ್ ವಲಿಉಲ್ಲಾಹ್ ಮುಹದ್ದಿಸ್ ದೆಹಲ್ವಿ(ಅನುವಾದ) ಸಂಪುಟ–3, ಪುಟ–228–229 ಕುತುಬ್ ಖಾನ ಕರಾಚಿ)

ಹಝ್ರತ್ ಅಲಿ(ರ) ಹೇಳುತ್ತಾರೆ: ಒಂದು ಸಲ ಹಝ್ರತ್ ಉಮರ್(ರ) ಬಹಳ ವೇಗವಾಗಿ ಎಲ್ಲಿಗೋ ಹೋಗುತ್ತಿರುವುದನ್ನು ನಾನು ಕಂಡೆನು. ಯಾ ಅಮೀರಲ್ ಮೂಅ್‌ಮಿನೀನ್ ನೀವು ಎಲ್ಲಿಗೆ ಹೋಗುತ್ತಿದ್ದೀರಿ ಎಂದು ನಾನು ಕೇಳಿದೆ. ಹಝ್ರತ್ ಉಮರ್(ರ) ಹೇಳಿದರು: ಸದಖದ ಒಂದು ಒಂಟೆ ಓಡಿಹೋಗಿದೆ. ಅದನ್ನು ಹುಡುಕಲು ಹೋಗುತ್ತಿದ್ದೇನೆ. ಹಝ್ರತ್ ಅಲಿ(ರ) ಹೇಳಿದರು: ನೀವು ನಿಮ್ಮ ನಂತರ ಬರುವ ಖಲೀಫರಿಗೆ ಬಹಳ ಕಷ್ಟದಾಯಕವಾದ ಮಾರ್ಗವನ್ನು ನಿಗದಿ ಪಡಿಸಿದ್ದೀರಿ. ಹಝ್ರತ್ ಉಮರ್(ರ) ಹೇಳಿದರು: ನನ್ನನ್ನು ದೂರಬೇಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರವಾದಿತ್ವದೊಂದಿಗೆ ಕಳುಹಿಸಿದ ಅಲ್ಲಾಹನ ಆಣೆ, ಒಂದು ಆಡಿನ ಮರಿ ಕೂಡ ಫರಾತ್ ನದಿಯ ದಡದಲ್ಲಿ ಕಾಣೆಯಾದರೆ, ಖಿಯಾಮತಿನ ದಿನ ಅದರ ಕಾರಣದಿಂದ ಉಮರ್ ಹಿಡಿಯಲ್ಪಡುವನು.
(ಇಝಾಲತುಲ್ ಖುಲಫಾ ಅನ್ ಖಿಲಾಫತುಲ್ ಖುಲಫಾ, ಶಾಹ್ ವಲಿಉಲ್ಲಾಹ್ ಮುಹದ್ದಿಸ್ ದೆಹಲ್ವಿ(ಅನುವಾದ) ಸಂಪುಟ–3, ಪುಟ–286–289 ಕುತುಬ್ ಖಾನ ಕರಾಚಿ) (ಮುಜಮುಲ್ ಬಲದಾನ್, ಸಂಪುಟ–1, ಪುಟ–96)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರರ ಕಾಲದಲ್ಲಿ ಒಬ್ಬ ಮುಸ್ಲಿಮನು ತಲೆ ತಗ್ಗಿಸಿ ನಡೆಯುತ್ತಿದ್ದನು. ಏನಾದರೂ ದುಃಖದಲ್ಲಿ ಇರಬಹುದು, ಆದ್ದರಿಂದ ತಲೆ ತಗ್ಗಿಸಿ ಹೋಗುತ್ತಿದ್ದನು. ಹಝ್ರತ್ ಉಮರ್(ರ) ಅವನ ಮುಖವನ್ನು ತಟ್ಟಿಕೊಂಡು ಹೇಳಿದರು: ಇದು ಇಸ್ಲಾಮಿನ ವಿಜಯಗಳ ಕಾಲವಾಗಿದೆ ಮತ್ತು ನೀನು ತಲೆಯನ್ನು ತಗ್ಗಿಸಿ ನಡೆಯುತ್ತಿದ್ದೀಯಾ? ಇಂತಹ ಕಾಲದಲ್ಲಿ ಸಣ್ಣ ಸಣ್ಣ ವಿಷಯುಕ್ಕೆ ದುಃಖಿಸಬೇಕಾದ ಅಥವಾ ಅಳಬೇಕಾದ ಆವಶ್ಯಕತೆಯಿಲ್ಲ. (ಖಾದಿಯಾನ್ ಸೇ ಹಮಾರಿ ಹಿಜ್ರತ್ ಏಕ್

ಆಸ್ಮಾನಿ ತಖ್ದೀರ್ ಥೀ, ಅನ್ವಾರುಲ್ ಉಲೂಮ್, ಸಂಪುಟ-21, ಪುಟ-379)

ಕ್ರೈಸ್ತ ಗೋತ್ರದ ಒಬ್ಬ ಬಹಳ ದೊಡ್ಡ ಸರದಾರನಾದ ಜಬ್ಲ ಬಿನ್ ಐಹಂ ಮುಸ್ಲಿಮನಾದನು. ಹಜ್ಜಿನ ವೇಳೆ ಒಬ್ಬ ಬಡ ಮುಸ್ಲಿಮನ ಕಾಲು ಅವನ ಕಾಲಿಗೆ ತಗುಲಿತು. ಜಬ್ಲ ಕೋಪದಿಂದ ಬಡ ಮುಸ್ಲಿಮನ ಕೆನ್ನೆಗೆ ಹೊಡೆದನು. ಆ ಮುಸ್ಲಿಮನ ಪ್ರತಿಕಾರವನ್ನು ಹಝ್ರ‌ತ್ ಉಮರ್(ರ) ನಿನ್ನಿಂದ ಪಡೆಯುವರು ಎಂದು ಜಬ್ಲರೊಡನೆ ಯಾರೋ ಹೇಳಿದರು. ಇದನ್ನು ಕೇಳಿದಾಗ ಜಬ್ಲ ಹಝ್ರ‌ತ್ ಉಮರರ(ರ) ಬಳಿಗೆ ಹೋಗಿ ಕೇಳಿದರು: ಬಹಳ ಶ್ರೇಷ್ಠನಾದ ಒಬ್ಬ ವ್ಯಕ್ತಿ ಯಾವನೇ ಸಾಧಾರಣ ವ್ಯಕ್ತಿಯ ಕೆನ್ನೆಗೆ ಹೊಡೆದರೆ ನೀವು ಏನು ಮಾಡುವಿರಿ. ಹಝ್ರ‌ತ್ ಉಮರ್(ರ) ಹೇಳಿದರು: ಇಸ್ಲಾಮಿನಲ್ಲಿ ಹಿರಿಯ ಕಿರಿಯನೆಂಬ ವ್ಯತ್ಯಾಸವಿಲ್ಲ. ಅನಂತರ ಹಝ್ರ‌ತ್ ಉಮರ್(ರ) ಕೇಳಿದರು: ನೀನೇ ಈ ತಪ್ಪು ಮಾಡಲಿಲ್ಲ ತಾನೆ? ಆಗ ಜಬ್ಲ ಹೀಗೆ ಸುಳ್ಳು ಹೇಳುತ್ತಾ ಹೇಳಿದನು: ನಾನು ಹೀಗೆಯೇ ಒಂದು ಪ್ರಶ್ನೆ ಕೇಳಿದಷ್ಟೆ. ಹೀಗೆ ಹೇಳುತ್ತಾ ಅಲ್ಲಿಂದ ಹೊರಟನು ಮತ್ತು ತನ್ನ ಸಮುದಾಯ ಸಮೇತ ಇಸ್ಲಾಂ ಧರ್ಮವನ್ನು ತ್ಯಜಿಸಿದನು ಮತ್ತು ಇಸ್ಲಾಮಿಕ ಆಡಳಿತದ ವಿರುದ್ಧ ರೋಮನ್ನರು ನಡೆಸಿದ ಯುದ್ಧದಲ್ಲಿ ಭಾಗಿಯಾದರು. ಆದರೆ ಹಝ್ರ‌ತ್ ಉಮರ್(ರ) ಅದರ ಪರಿವೆ ಮಾಡಲಿಲ್ಲ. (ಸೈರೆ ರೂಹಾನಿ(2) ಅನ್ವಾರುಲ್ ಉಲೂಮ್, ಸಂಪುಟ-16, ಪುಟ-42-43) ಇಸ್ಲಾಮಿಕ ಆಡಳಿತಗಳು ಸ್ಥಾಪಿಸಿದ ಸಮಾನತೆ ಇದಾಗಿತ್ತು. ಇಂದಿನ ಇಸ್ಲಾಮಿಕ ಆಡಳಿತಕ್ಕೂ ಇದು ಒಂದು ಪಾಠವಾಗಿದೆ.

ಇದರ ಪ್ರಸ್ತಾಪ ಮುಂದುವರೆಯುವುದು. ಈಗ ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಮೊದಲ ಪ್ರಸ್ತಾಪ ಅಬ್ದುಲ್‌ವಹೀದ್ ವಡಾಇಚ್ ಸಾಹಿಬ್‌ರದ್ದಾಗಿದೆ. ಅವರು ಜರ್ಮನಿಯ ವಾಲ್ಡ್‌ಶಟ್ ಜಮಾಅತಿನ ಸದರ್ ಆಗಿದ್ದರು. ಸ್ವೀಝರ್‌ಲ್ಯಾಂಡಿನ ಮಾಜಿ ಸದರ್ ಖುದ್ದಾಮುಲ್ ಅಹ್ಮದಿಯಾ ಮತ್ತು ಮಾಜಿ ನೇಶನಲ್ ಸೆಕ್ರಟರಿ ತರ್‌ಬಿಯತ್ ಆಗಿದ್ದರು. ಮೇ 12ರಂದು ಮೌಂಟ್ ಎವರೆಸ್ಟನ್ನು ವಿಜಯಕರವಾಗಿ ಏರಿದ ನಂತರ ಅದರ ಮೇಲೆ ಅಹ್ಮದಿಯ್ಯತಿನ ಧ್ವಜವನ್ನು ಹಾರಿಸಿದ ನಂತರ ಕೆಳಗೆ ಇಳಿಯುವಾಗ ಆರೋಗ್ಯ ಕೆಟ್ಟುಹೋದ ಕಾರಣದಿಂದ 41ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಪತ್ನಿಯನ್ನಲ್ಲದೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ತಂದೆ ತಾಯಂದಿರು ಮತ್ತು ಇಬ್ಬರು ಸಹೋದರಿಯರನ್ನು ಅಗಲಿರುವರು.

ಸ್ವೀಝ್‌ಲ್ಯಾಂಡಿನ ಅಮೀರ್ ಸಾಹಿಬ್‌ರಾದ ತಾರಿಕ್ ಮುದಸ್ಸಿರ್ ಬರೆಯುತ್ತಾರೆ: ಅಬ್ದುಲ್ ವಹೀದ್ ವಡಾಇಚ್ ಸಾಹಿಬ್‌ರು ಆರಂಭದಿಂದ ಮರಣದ ವರೆಗೆ ಸದಾ ಜಮಾಅತಿನ ಒಬ್ಬ ಕ್ರಿಯಾಶೀಲ ಮೆಂಬರ್ ಆಗಿದ್ದರು. ಜಮಾಅತಿನ ಮೆಂಬರ್ ಮತ್ತು ಹುದ್ದೇದಾರನೆಂಬ ನೆಲೆಯಲ್ಲಿ ಒಬ್ಬ ಮಾದರಿ ಅಹ್ಮದಿಯಾಗಿದ್ದರು. ಅವರು ಒಬ್ಬ ನಿಷ್ಠಾವಂತ ಅಹ್ಮದಿಯಾಗಿದ್ದರು. ಅಬ್ದುಲ್ ವಹೀದ್ ಸಾಹಿಬ್‌ರು ಜಮಾಅತಿನ ಸೇವೆಗಳನ್ನು ಸದಾ ಅತ್ಯಂತ ವಿನಯದಿಂದ ನಿರ್ವಹಿಸುತ್ತಿದ್ದರು. ಅವರ ಸ್ವಭಾವದಲ್ಲಿ ಅಹಂಕಾರಕ್ಕೆ ಯಾವುದೇ ಜಾಗವಿರಲಿಲ್ಲ. ಅವರು ಮಾನವ ಸೇವೆ ಮಾಡಲು ಇತರರನ್ನು ಉಪದೇಶಿಸುತ್ತಿದ್ದರು ಎಂದು ಮಾತ್ರವಲ್ಲ, ಬದಲಿಗೆ ತನ್ನ ಸ್ವಂತ ಮಾದರಿಯಿಂದ ಅದನ್ನು ತೋರಿಸುತ್ತಿದ್ದರು. ಐಎಎಇಯ ಹಲವು ಪ್ರೊಜೆಕ್ಟಿಗಾಗಿ ಆಫ್ರಿಕ ಸಹ ಹೋಗಿದ್ದರು. ಅಲ್ಲಿ ಜನಸೇವೆ ಮಾಡಿದರು. ಅದನ್ನು ನೋಡಿಕೊಂಡು ಅನೇಕ ಯುವಕರು ಅವರ ಮಾದರಿಯನ್ನು ಅನುಸರಿಸುತ್ತಾ ಆಫ್ರಿಕಕ್ಕೆ ಹೋದರು. ಖುದ್ದಾಮುಲ್ ಅಹ್ಮದಿಯಾದ ಸದರ್ ಆಗಿ ನಿಶ್ಚಯಿಸಲ್ಪಟ್ಟಾಗ ಹೊಸ ಹೊಸ ಅವಕಾಶಗಳನ್ನು ಹುಡುಕಿಕೊಂಡು ಯುವಕರ ಶಿಕ್ಷಣ ಮತ್ತು ತರಬೇತಿಯ ವ್ಯವಸ್ಥೆ ಮಾಡುತ್ತಿದ್ದರು. ಅವರನ್ನು ಯುರೋಪಿನ ಲೌಕಿಕ ಚಿಂತೆ ಮತ್ತು ಆಸಕ್ತಿಗಳಿಂದ ದೂರವಿರಿಸುತ್ತಿದ್ದರು. ಅವರ ಧನತ್ಯಾಗವು ಮಾದರಿಯಾಗಿತ್ತು. ಮಕ್ಕಳ ತರಬೇತಿ ಸಹ ಉತ್ತಮವಾಗಿ ನಡೆಸಿದರು. ಅದರ ಪರಿಣಾಮವಾಗಿ ಅವರ ಒಬ್ಬ ಮಗನಾದ ತಲ್‌ಹ ಜಾಮಿಅ ಅಹ್ಮದಿಯಾ ಜರ್ಮನಿಯಲ್ಲಿ ಕಲಿಯುತ್ತಿದ್ದಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ದಿವಂಗತರು ಅಲ್ಲಾಹನ ಹಕ್ಕು ಮತ್ತು ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವ ಒಬ್ಬ ಮಾದರಿ ಅಹ್ಮದಿಯಾಗಿದ್ದರು

ಅಹ್ಮದಿಯೇತರ ಬಾಂಧವರು ಸಹ ಅವರ ಮರಣದ ಬಗ್ಗೆ ದುಃಖವನ್ನು ವ್ಯಕ್ತಪಡಿಸಿದ್ದಾರೆ. ಮಿಸ್ಟರ್ ಸೀಫನ್ ಲಾರ್ಡ್ ಬರೆಯುತ್ತಾರೆ: ವಡಾಇಚ್ ಸಾಹಿಬ್‌ರೊಂದಿಗೆ ಹಲವು ವರ್ಷಗಳಷ್ಟು ಸ್ವಿಝ್ ಕಂಪೆನಿಯಲ್ಲಿ ಕೆಲಸ ಮಾಡಿದ್ದೇನೆ. ಅದು ಸ್ವಿಜ಼ರ್‌ಲ್ಯಾಂಡಿನ ಅತಿದೊಡ್ಡ ಟೆಲಿ ಕಮ್ಯೂನಿಕೇಶನ್ ಕಂಪನಯಾಗಿದೆ. ಸುಮಾರು ಒಂದು ವರ್ಷ ಅವರೊಂದಿಗೆ ಅವರ ಟೀಮಿನೊಂದಿಗೆ ಕೆಲಸ ಮಾಡಿದ್ದೇನೆ. ಅವರಿಗೆ ಈ ಕೆಲಸದಲ್ಲಿ ಇರುವ ಯೋಗ್ಯತೆಯ ಕಾರಣದಿಂದ ಮಾತ್ರ ಅವರನ್ನು ನಾನು ಗೌರವಿಸುತ್ತಿಲ್ಲ, ಬದಲಿಗೆ ಅವರ ವಿಶೇಷವಾದ ಕಾರ್ಯವೈಖರಿಯ ಕಾರಣದಿಂದ ಗೌರವಿಸುತ್ತೇನೆ. ವಡಾಇಚ್ ಸಾಹಿಬ್‌ರು ಸದಾ ಹಸನ್ಮುಖರಾಗಿ ವರ್ತಿಸುತ್ತಿದ್ದರು ಅವರು ಇತರರಿಗೆ ಸಹಾಯ ಮಾಡುವ, ಪ್ರಾಮಾಣಿಕ ಮತ್ತು ವಿಶ್ವಸನೀಯ ವ್ಯಕ್ತಿಯಾಗಿದ್ದರು. ನನಗೆ ಅವರೊಡನೆ ಕೆಲಸದ ಬಗ್ಗೆ ಅಲ್ಲದೆಯೂ ಮಾತುಕತೆ ನಡೆಸುವುದು ಬಹಳ ಇಷ್ಟಕರವಾಗಿತ್ತು.

ಮುರಬ್ಬಿ ಸಾಹಿಬ್‌ರು ಬರೆಯುತ್ತಾರೆ: ವಡಾಇಚ್ ಸಾಹಿಬ್‌ರು ಅತ್ಯಂತ ಉನ್ನತ ಗುಣಗಳುಳ್ಳ ವ್ಯಕ್ತಿಯಾಗಿದ್ದರು. ಖಿಲಾಫತಿನೊಂದಿಗೆ ಪ್ರೀತಿಯಿತ್ತು. ನಿಯತವಾಗಿ ಜುಮಾ ನಮಾಝ್ ಮತ್ತು ಇತರ ನಮಾಝ್‌ಗಳನ್ನು ಮಸೀದಿಯಲ್ಲಿ ನಿರ್ವಹಿಸಲು ಪ್ರಯತ್ನಿಸುತ್ತಿದ್ದರು. ತಹಜ್ಜುದ್ ನಿರ್ವಹಿಸುವವರಾಗಿದ್ದರು. ನ್ಯಾಶನಲ್ ಸೆಕ್ರಟರಿ ಮಾಲ್ ಆದ ರಿಝ್‌ವಾನ್ ಸಾಹಿಬ್ ಬರೆಯುತ್ತಾರೆ: ಸ್ವಿಝರ್‌ಲ್ಯಾಂಡ್ ಬ್ರಾಂಚಿನ ಮೈಕ್ರೋಸಾಫ್ಟ್ ಕಂಪೆನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಅವರು ನೌಕರಿ ಮಾಡುತ್ತಿದ್ದ ಕಾಲದಲ್ಲಿ ಒಂದು ಬಾರಿ ಅವರು ನನ್ನೊಡನೆ ಹೇಳಿದರು: ಮೈಕ್ರೋಸಾಫ್ಟಿನ ಸ್ವೀಜ಼ರ್‌ಲ್ಯಾಂಡಿನ ಬ್ರಾಂಚ್ ಅದನ್ನು ಕೊನೆಗೊಳಿಸಿ ಸಿಲಿಕಾನ್ ವೇಲಿಗೆ ಹೋಗುತ್ತಿದೆ. ಅವರೊಡನೆ ಹೋಗಲು ಅವರು ನನಗೆ ಆಫರ್ ನೀಡಿರುವರು. ಅಲ್ಲಿ ಎಲ್ಲ ಸೌಲಭ್ಯಗಳು ಸಿಗುವುದು ಮತ್ತು ಸಂಬಳ ಸಹ ಹೆಚ್ಚಾಗುವುದು. ಸ್ವೀಝರ್‌ಲ್ಯಾಂಡಿನಲ್ಲಿರುವ ನನ್ನ ಸಾಮಾನುಗಳನ್ನು ಕೂಡ ಅವರೇ ಸ್ಥಳಾಂತರಿಸುವುದು. ಆದರೆ ನಾನು ಆ ಆಫರನ್ನು ನಿರಾಕರಿಸಿದೆ. ಏಕೆಂದರೆ ನನಗೆ ಇಲ್ಲಿ ಜಮಾಅತಿನ ಜವಾಬ್ದಾರಿಯಿದೆ. ಅದನ್ನು ನಾನು ಬಿಡಲು ಬಯಸುವುದಿಲ್ಲ. ಆದರಿಂದ ಅದನ್ನು ನಿರಾಕರಿಸಿ ಅಲ್ಲಿಗೆ ಹೋಗಲು ಸಾಧ್ಯವಲ್ಲ. ಸೆಕ್ರಟರಿ ಮಾಲ್ ಸಾಹಿಬ್ ಹೇಳುತ್ತಾರೆ: ಅದು ಆದ ನಂತರ ಕೆಲವು ದಿನಗಳ ನಂತರ ಅವರು ನನ್ನೊಡನೆ ಹೇಳಿದರು: ಅವರು ನನ್ನನ್ನು ಅಲ್ಲಿಗೆ ಕೊಂಡುಹೋಗಲು ಬಯಸುತ್ತಿದ್ದರು. ಆದರೆ ಅಲ್ಲಾಹನು ಇಲ್ಲೇ ವ್ಯವಸ್ಥೆ ಮಾಡಿದ್ದನು. ಮಾತ್ರವಲ್ಲ. ಅಲ್ಲಾಹನ ಕೃಪೆಯಿಂದ ನನ್ನ ಸಂಬಳ ನನ್ನ ಬಾಸಿಗಿಂತ ಹೆಚ್ಚಿದೆ.

ನೇಶನಲ್ ಸೆಕ್ರಟರಿ ಉಮೂರೆ ಖಾರ್‌ಜರಾದ ಝಾಹಿದ್ ಸಾಹಿಬ್ ಹೇಳುತ್ತಾರೆ: 24 ವರ್ಷಗಳಿಂದ ನನಗೆ ವಡಾಇಚ್ ಸಾಹಿಬ್‌ರ ಪರಿಚಯವಿದೆ. ಖುದ್ದಾಮುಲ್ ಅಹ್ಮದಿಯಾದಲ್ಲೇ ಅವರೊಂದಿಗೆ ಸೇವೆ ಸಲ್ಲಿಸಲು ನನಗೆ ಸಂದರ್ಭ ಸಿಕ್ಕುತ್ತಾ ಇತ್ತು. ಅತ್ಯಂತ ಸಭ್ಯ, ಉಪವಾಸ ಮತ್ತು ನಮಾಝ್ ಪಾಲನೆ ಮಾಡುವವರೂ, ಅತ್ಯಂತ ಪರಿಶ್ರಮಿ, ಖಿಲಾಫತಿನ ಪ್ರೇಮಿ ಮತ್ತು ಅನುಸರಣೆ ಹೊಂದಿದ್ದ ವ್ಯಕ್ತಿಯಾಗಿದ್ದರು. ಕೃಪಾಳು ಸ್ನೇಹಿತ ಮತ್ತು ಸ್ನೇಹಮಯಿ ವ್ಯಕ್ತಿಯಾಗಿದ್ದರು. ಯೌವ್ವನದಲ್ಲೇ ಇತರ ಯುವಕರಿಂದ ವ್ಯತ್ಯಾಸವುಳ್ಳ ಸ್ವಭಾವದ ವ್ಯಕ್ತಿಯಾಗಿದ್ದರು. ದಿವಂಗತರನ್ನು ಎಂದಿಗೂ ಕೋಪದಲ್ಲಿ ನಾನು ನೋಡಿರಲಿಲ್ಲ ಮತ್ತು ಎಂದಿಗೂ ಅದರ ಪ್ರಭಾವ ಅವರ ಮುಖದಲ್ಲೋ ಮಾತಿನ ಶೈಲಿಯಲ್ಲೋ ನೋಡಿಲ್ಲ. ಎಂದಿಗೂ ಉಚ್ಚ ಸ್ವರದಲ್ಲಿ ಅಥವಾ ಕಠಿಣವಾಗಿ ಮಾತನಾಡುವುದನ್ನು ಕಂಡಿಲ್ಲ. ನಮ್ಮಿಂದ ತಪ್ಪುಗಳು ಉಂಟಾದರೆ, ಯಾವಾಗಲೂ ಒಬ್ಬಂಟಿಯಾಗಿ ಕೊಂಡುಹೋಗಿ ಸೌಮ್ಯವಾಗಿ ತಿಳಿಮಾತುಗಳನ್ನು ಹೇಳುತ್ತಿದ್ದರು. ಹಿರಿಯ ಮತ್ತು ಕಿರಿಯರೊಂದಿಗೆ ಸದಾ ಹಸನ್ಮುಖರಾಗಿ ಮತ್ತು ಖುಶಿಯಿಂದ ವರ್ತಿಸುತ್ತಿದ್ದರು. ಹಗುರವಾದ ಮುಗುಳ್ನಗೆ ಮುಖದಲ್ಲಿ ಇರುತ್ತಿತ್ತು. ಜೀವ, ಸಂಪತ್ತು, ಸಮಯ ಮತ್ತು ಗೌರವವನ್ನು ತ್ಯಾಗ ಮಾಡಲು ಸಿದ್ಧವಾಗುವುದಕ್ಕೆ ಜೀವಂತ ಮಾದರಿಯಾಗಿದ್ದರು. ಸ್ವೀಜ಼ರ್‌ಲ್ಯಾಂಡಿನ ಅನೇಕ ಯುವಕರ ಶಿಕ್ಷಣ ಮತ್ತು ಭವಿಷ್ಯದ ಕುರಿತು ಯುವಕರಿಗೆ ಮಾರ್ಗದರ್ಶನ ನೀಡಿದರು ಎಂದು ಮಾತ್ರವಲ್ಲ, ಅನೇಕರಿಗೆ ನೌಕರಿ ಸಿಗುವುದಕ್ಕೂ ಸಹಾಯವನ್ನು ಮಾಡಿದ್ದರು. ಖುದ್ದಾಮುಲ್ ಅಹ್ಮದಿಯಾದ ಅಡಿಯಲ್ಲಿ ಅವರು ಅಹ್ಮದಿಯಾ ಹೈಕಿಂಗ್ ಕ್ಲಬ್ ಸಹ ಸ್ಥಾಪಿಸಿದರು. ಅನೇಕ ಯುವಕರಿಗೆ ಹೈಕಿಂಗ್ ಪರಿಚಯ ಪಡಿಸಿಕೊಟ್ಟರು. ಅಸಾಧಾರಣವಾದ ದೃಢನಿರ್ಧಾರ ಹೊಂದಿದ್ದ ವ್ಯಕ್ತಿಯಾಗಿದ್ದರು. ಸೆಕ್ರಟರಿ ಸಾಹಿಬ್ ಹೇಳುತ್ತಾರೆ: ನಿಮಗೆ ಹೈಕಿಂಗ್ ಮಾಡುವಾಗ ಹೆದರಿಕೆಯುಂಟಾಗುವುದಿಲ್ಲವೇ ಎಂದು ನಾನು ಅವರೊಡನೆ ಕೇಳಿದೆ. ಅವರು ಹೇಳಿದರು: ಉಂಟಾಗುತ್ತದೆ ಮತ್ತು ನನ್ನ ಕುಟುಂಬ ಸಹ ಅದನ್ನು ಇಷ್ಟಪಡುತ್ತಿರಲಿಲ್ಲ. ಆದರೆ ನಾನು ಖಲೀಫತುಲ್ ಮಸೀಹರನ್ನು ಭೇಟಿಯಾಗಿಕೊಂಡು ಆ ಭಯವನ್ನು ಪರಿಹರಿಸಿದೆ.

ಅವರು ನನ್ನನ್ನು ಭೇಟಿಯಾಗಿದ್ದರು. ಏಳು ಭೂಖಂಡಗಳ ಉತ್ತುಂಗಕ್ಕೆ ತಲುಪಿಕೊಂಡು ಅವುಗಳಲ್ಲಿ ಅಹ್ಮದಿಯ್ಯತಿನ ಬಾವುಟವನ್ನು ಹಾರಿಸಲು ಅನುಮತಿಯನ್ನು ಪಡೆದರು. ನಾನು ಬೇಡವೆಂದು ಹೇಳುವೆನು ಎಂಬ ಭಯ ಅವರಿಗೆ ಇತ್ತು. ಆದರೆ ನಾನು ಅವರೊಡನೆ ಹೇಳಿದೆ: ಹೋಗಲು ಸಾಧ್ಯವಾದರೆ, ಧ್ವಜವನ್ನು ಹಾರಿಸು. ಅನಂತರ ಆ ಯುವಕ ಎಂದಿಗೂ ಹಿಂದೆ ನೋಡಲಿಲ್ಲ. ಈ ಮಹತ್ತಾದ ಉದ್ದೇಶವನ್ನು ಪಡೆಯಲು

ಅತ್ಯಂತ ಪ್ರಯತ್ನ ಮಾಡಿದರು. ಒಂದರ ನಂತರ ಇನ್ನೊಂದು ಎಂಬಂತೆ ಪರ್ವತ ಶಿಖರವನ್ನು ಏರುತ್ತಾ ಹೋದರು. ದಿವಂಗತರಿಗೆ ಲೋಕದ ಅತ್ಯಂತ ಎತ್ತರದ ಪರ್ವತವಾದ ಮೌಂಟ್ ಎವರೆಸ್ಟ್‌ನಲ್ಲೂ ಅಹ್ಮದಿಯ್ಯತ್ತಿನ ಧ್ವಜವನ್ನು ಹಾರಿಸಲು ಸೌಭಾಗ್ಯ ಲಭಿಸಿತು. ಬರೆಯುವವರು ಬರೆಯುತ್ತಾರೆ: ಅವರ ಮರಣವನ್ನು ಶಹಾದತ್ ಎಂದು ಹೇಳಬಹುದೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ಆದರೆ ದಿವಂಗತರಲ್ಲಿ ಸಾತ್ವಿಕರಿಗೆ ಇರುವಂತಹ ವಿಶ್ವಾಸದ ಆವೇಶವಿತ್ತು ಎಂದು ಹೇಳಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ, ಅವರು ಖಂಡಿತವಾಗಿಯೂ ಸದುದ್ದೇಶ ಮತ್ತು ಸ್ಫೂರ್ತಿಯಿಂದ ಇಸ್ಲಾಂ, ಅಹ್ಮದಿಯ್ಯತ್ ಮತ್ತು ಅಲ್ಲಾಹನ ಏಕತೆಯ ಸಂದೇಶವನ್ನು ತಲುಪಿಸಲು ಪ್ರಯತ್ನಿಸಿದರು. ಅದರಲ್ಲಿ ಯಶಸ್ಸನ್ನು ಸಹ ಪಡೆದರು. ಅದೇ ಉದ್ದೇಶದಲ್ಲಿ ಮಾಡಲಾದ ಯಾತ್ರೆಯಲ್ಲೇ ಅಲ್ಲಾಹನ ಮುಂದೆ ಹಾಜರಾದರು. ಅವರು ಖಂಡಿತವಾಗಿಯೂ ಶಹಾದತಿನ ಪದವಿಯನ್ನು ಪಡೆದಿರಬಹುದು. ಅಲ್ಲಾಹನು ಅವರನ್ನು ಶಹೀದರಲ್ಲಿ ಗಣಿಸಲಿ.

ಅವರ ತಂದೆಯಾದ ಸನ್ಮಾನ್ಯ ಖ್ವಾದಿಂ ಹುಸೈನ್ ವಡಾಇಚ್ ಹೇಳುತ್ತಾರೆ: ನಮ್ಮ ಈ ಮಗನು ಮುಂದು ಮುಂದಕ್ಕೆ ಹೋಗುತ್ತಿರುವುದನ್ನು ನಾವು ನೋಡುತ್ತಿದ್ದುವು. ಒಂದು ಪರ್ವತದ ನಂತರ ಇನ್ನೊಂದು ಪರ್ವತವನ್ನು ಏರುತ್ತಿದ್ದನು. ಅವನು ಎಂದಿಗೂ ಅದರಿಂದ ಹಿಂದೆ ಸರಿಯಲಿಲ್ಲ. ನಾನೇಕೆ ಅವರನ್ನು ಇದರಿಂದ ತಡೆಯುತ್ತಿಲ್ಲವೆಂದು ನನ್ನ ಸ್ನೇಹಿತರು ಕೇಳುತ್ತಿದ್ದರು. ಇದು ಅತ್ಯಂತ ಅಪಾಯಕಾರಿಯಾದ ಹವ್ಯಾಸವಾಗಿದೆ. ನಾನು ಅದಕ್ಕೆ ಹೀಗೆ ಉತ್ತರ ಕೊಡುತ್ತಿದ್ದೆ: ನಾನು ತಡೆದರೂ ಇವನು ಅದರಿಂದ ಹಿಂದೆ ಸರಿಯಲಿಕ್ಕಿಲ್ಲ. ಜಮಾಅತಿನ ಧ್ವಜವನ್ನು ಲೋಕದ ಎಲ್ಲ ಶಿಖರಗಳಲ್ಲೂ ಹಾರಿಸಬೇಕು ಮತ್ತು ಅಲ್ಲಾಹನ ಏಕತೆಯ ಸಂದೇಶ ತಲುಪಿಸುವ ಆವೇಶ ಅವರಲ್ಲಿತ್ತು.

ಒಬ್ಬರು ಬರೆಯುತ್ತಾರೆ: ನಾನು ಒಂದು ಬಾರಿ ಸದರ್ ಸಾಹಿಬ್‌ರೊಡನೆ ಕೇಳಿದೆ: ನೀವು ಪರ್ವತಗಳನ್ನು ಏರುವಾಗ ನಿಮ್ಮನ್ನು ಸ್ವತಃ ಪ್ರಚೋದಿಸಲು ಫೋನಿನಲ್ಲಿ ಏನು ಕೇಳುತ್ತೀರಿ? ಆಗ ಸದರ್ ಸಾಹಿಬ್‌ರು ನನ್ನೊಡನೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಗ್ರಂಥಗಳನ್ನು ಡೌನ್‌ಲೋಡ್ ಮಾಡಿದ್ದೇನೆ. ಯಾತ್ರೆಯಲ್ಲಿ ಅದನ್ನು ಕೇಳುತ್ತೇನೆ. ನಾನು ಒಂದು ಸಲ ಸದರ್ ಸಾಹಿಬ್‌ರೊಡನೆ ಕೇಳಿದೆ. ಇಷ್ಟು ಎತ್ತರದಲ್ಲಿ ಮತ್ತು ಇಷ್ಟು ಚಳಿಯಲ್ಲಿ ಆರಾಧನೆ ಹೇಗೆ ಮಾಡುತ್ತೀರಿ? ಆಗ ಸದರ್ ಸಾಹಿಬ್ ಹೇಳಿದರು: ನನಗೆ ಪರ್ವತಗಳಲ್ಲಿ ಆರಾಧನೆ ಮಾಡುವಾಗ ತುಂಬ ಖುಶಿಯಾಗುತ್ತದೆ. ಅಲ್ಲಾಹನ ಪ್ರವಾದಿಗಳು ಸಹ ಪರ್ವತಗಳಲ್ಲಿ ಏಕಾಂತವಾಗಿ ಲೋಕದ ಗದ್ದಲಗಳಿಂದ ದೂರ ಹೋಗಿ ಆರಾಧನೆ ಮಾಡುತ್ತಿದ್ದರು ಎಂಬ ಯೋಚನೆ ನನಗೆ ಬರುತ್ತದೆ. ಅಬ್ದುಲ್‌ವಹೀದ್ ವಡಾಇಚ್ ಸಾಹಿಬ್‌ರು ಹೇಳಿದ್ದ ಒಂದು ಘಟನೆ ಹೀಗಿದೆ: ನಾರ್ಥ್ ಅಲಸ್ಕದಲ್ಲಿ ಇರುವ ಲೋಕದ ಅತ್ಯಂತ ತಂಪು ಪರ್ವತವನ್ನೇರುವ ವೇಳೆ ಅವರ ಶಹಾದತಿನ ಬೆರಳು ಎಂದರೆ ತೋರುಬೆರಳು ಹೆಪ್ಪುಗಟ್ಟಿತು. ಅದನ್ನು ಡಾಕ್ಟರ್‌ಗೆ ತೋರಿಸಿದಾಗ ಡಾಕ್ಟರ್ ಹೇಳಿದರು: ಇದು ಪೂರ್ಣವಾಗಿ ಹೆಪ್ಪುಗಟ್ಟಿದೆ. ಆದ್ದರಿಂದ ಅದನ್ನು ಬೇಗನೇ ಕತ್ತರಿಸಬೇಕಾಗುವುದು. ಸದರ್ ಸಾಹಿಬ್ ಹೇಳಿದರು: ಇದು ಶಹಾದತಿನ ಬೆರಳಾಗಿದೆ. ಇದರೊಂದಿಗೆ ನಾವು ನಮಾಝ್‌ನಲ್ಲಿ ಅಲ್ಲಾಹನ ಏಕತೆಯ ಸಾಕ್ಷ್ಯವನ್ನು ವಹಿಸುತ್ತೇವೆ. ಆದ್ದರಿಂದ ಅದನ್ನು ಎಂದಿಗೂ ಕತ್ತರಿಸುವುದಿಲ್ಲ. ಅದರ ನಂತರ ಅಲ್ಲಾಹನು ಕೃಪೆದೋರಿದನು. ಅನಂತರ ದುಆದಿಂದ ಆ ಬೆರಳು ಸಂಪೂರ್ಣವಾಗಿ ಸರಿಯಾಯಿತು. ಅಲ್ಲಾಹನು ಅವರ ಮಕ್ಕಳಿಗೂ ಅವರ ಸತ್ಕರ್ಮಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಅವರ ಸ್ವಭಾವ ವೈಶಿಷ್ಟ್ಯಗಳ ಬಗ್ಗೆ ಜನರು ಹೇಳಿದ್ದ ಸಂಗತಿಗಳಿಗಿಂತ ಹೆಚ್ಚು ಉತ್ತಮವಾಗಿತ್ತು ಅವರ ಸ್ವಭಾವಗಳು. ಖಿಲಾಫತಿನ ಪ್ರತಿಯೊಂದು ಆಜ್ಞೆಗಳನ್ನು ಸಂಪೂರ್ಣವಾಗಿ ಅನುಸರಿಸುವ, ಕೇವಲ ಬಾಯಿಮಾತಿನಿಂದ ಅಲ್ಲ, ಬದಲಾಗಿ ಪ್ರಾಮಾಣಿಕತೆ ಮತ್ತು ನಿಷ್ಠೆಯಲ್ಲಿ ಬಹಳ ಮುಂದಿದ್ದರು. ಅದರಲ್ಲಿ ಮುಂದಾಗಲು ಪ್ರಯತ್ನಿಸುತ್ತಿದ್ದರು. ಅಂತಹ ಜನರು ಹೋಗುವಾಗ ಒಂದು ಖಲಾ ಉಂಟಾಗುತ್ತದೆ. ಹೇಗಿದ್ದರೂ ನಾನು ಹೇಳಿದಂತೆ ಅಲ್ಲಾಹನ ದೀನ್ ಮತ್ತು ಅವನ ಏಕತೆಯ ಧ್ವಜವನ್ನು ಎಲ್ಲ ಉನ್ನತ ಜಾಗದಲ್ಲಿ ಹಾರಿಸುವ ಉದ್ದೇಶದಲ್ಲಿ ಅವರು ವಿಜಯಿಯಾದರು.

ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ಎರಡನೆಯದಾಗಿ ಡಾಕ್ಟರ್ ಅಬ್ದುಲ್ ಮಾಲಿಕ್ ಶಮೀಂ ಸಾಹಿಬ್‌ರ ಪತ್ನಿಯಾದ ಅಮತುನ್ನೂರ್ ಸಾಹಿಬರದ್ದಾಗಿದೆ. ಸಾಹಿಬ್‌ಝಾದ ಅಮತುರ್ರಶೀದ್ ಬೇಗಂ ಮತ್ತು ಮಿಯಾ ಅಬ್ದುರ್ರಹ್ಮಾನ್ ಸಾಹಿಬ್‌ರ ಮಗಳಾಗಿದ್ದರು. ಜೂನ್ 15ರಂದು ಅಮೇರಿಕದ ವಾಶಿಂಗ್‌ಟನಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೊಮ್ಮಗಳ ಮಗಳು ಮತ್ತು ತಾಯಿಯ ಕಡೆಯಿಂದ ಹಝ್ರತ್ ಖಲೀಫತುಲ್ ಮಸೀಹರ ಮೊಮ್ಮಗಳ ಮಗಳಾಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತು ಸಯ್ಯದ ಅಮತುಲ್ ಹಯ್ಯ್ ಸಾಹಿಬರ ಮೊಮ್ಮಗಳು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಹಝ್ರತ್ ಪ್ರೊಫೆಸರ್ ಅಲಿ ಅಹ್ಮದ್ ಆಫ್ ಬಿಹಾರರ ಮೊಮ್ಮಗಳಾಗಿದ್ದರು. ಅವರ ವಿವಾಹ ನಾನು ಹೇಳಿದಂತೆ ಮೌಲವಿ ಅಬ್ದುಲ್‌ಬಾಖಿ ಸಾಹಿಬ್‌ರ ಮಗನಾದ ಡಾಕ್ಟರ್ ಅಬ್ದುಲ್ ಮಾಲಿಕ್ ಶಮೀಂ ಸಾಹಿಬ್‌ರೊಂದಿಗೆ ನಡೆದಿತ್ತು. ಅಲ್ಲಾಹನು ಅವರಿಗೆ ಇಬ್ಬರು ಪುತ್ರರನ್ನು ನೀಡಿದ್ದನು. ಅವರ ನಿಕಾಹ್ ವೇಳೆಯಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ನಡೆಸಿದ ನಿಕಾಹ್ ಖುತ್ಬದಲ್ಲಿ ಅವರು ಹೇಳಿದ ಒಂದು ಮಾತು ಏನೆಂದರೆ, ಕರ್ಮಗಳ ಸುಧಾರಣೆಗಾಗಿ ನೇರವಾದ ಮಾತುಗಳನ್ನು ಹೇಳುವುದು ಆವಶ್ಯಕ ಎಂದಾಗಿತ್ತು. ಹೆಚ್ಚಿನ ಕಷ್ಟತೆಗಳು ಮತ್ತು ತೊಂದರೆಗಳು ದುಷ್ಕರ್ಮಗಳ ಪರಿಣಾಮದಿಂದ ಬರುತ್ತವೆ. ಪರಸ್ಪರ ಸಂಬಂಧದಲ್ಲಿ ದುಷ್ಕರ್ಮಗಳ ಕಾರಣ ನೇರವಾದ ಮಾತುಗಾರಿಕೆ ನಡೆಸದಿರುವುದಾಗಿದೆ. ಪರಿಶುದ್ಧ ಮತ್ತು ನೇರವಾದ ರೀತಿಯಲ್ಲಿ ಸತ್ಯವಿಶ್ವಾಸದೊಂದಿಗೆ ಮಾತನಾಡಿದರೆ ಯಾವುದೇ ತಪ್ಪು ಭಾವನೆಯ ಸಾಧ್ಯತೆಯಿರುವುದಿಲ್ಲ. ಯಾವುದೇ ಅಸಮಾಧಾನ ಮತ್ತು ಕಷ್ಟತೆಯ ಸಾಧ್ಯತೆಯೂ ಇರುವುದಿಲ್ಲ. ಅಲ್ಲಾಹನು ನಮಗೆಲ್ಲರಿಗೂ ಸತ್ಕರ್ಮಗಳನ್ನು ಮಾಡಲು ಸೌಭಾಗ್ಯ ನೀಡಲಿ ಮತ್ತು ನಮ್ಮೆಲ್ಲರ ಕರ್ಮಗಳನ್ನು ಸುಧಾರಿಸಲಿ. ನೇರವಾದ ಮಾತು ನಮ್ಮ ವೈಶಿಷ್ಟ್ಯವಾಗುವ ರೀತಿಯಲ್ಲಿ ಅದು ನಮ್ಮ ಅಭ್ಯಾಸವಾಗಲಿ.

ಈ ನಿಕಾಹ್‌ದೊಂದಿಗೆ ಬೇರೆ ಐದಾರು ನಿಕಾಹ್‌ಗಳು ಸಹ ಆಗಿತ್ತು. ಅದರಲ್ಲಿ ಒಂದು ನಿಕಾಹ್ ಸ್ನೇಹ ಸಂಬಂಧದಲ್ಲಿ ನನ್ನ ಸ್ವಂತ ಮಗಳಾಗಿದ್ದಾಳೆ. ಎಂದರೆ ಮಿಯಾ ಅಬ್ದುರ್ರಹೀಂ ಸಾಹಿಬ್ ಮತ್ತು ನನ್ನ ಕಿರಿಯ ಸಹೋದರಿಯಾದ ಅಮತುರ್ರಶೀದ್ ಬೇಗಮ್‌ರ ಪುತ್ರಿ ಅಮತುನ್ನೂರ್ ಆಗಿದೆ. ಅವರ ನಿಕಾಹ್ ಅಬ್ದುಲ್ ಬಾಕಿಯ ಮಗನಾದ ಡಾಕ್ಟರ್ ಅಬ್ದುಲ್ ಮಾಲಿಕ್ ಶಮೀಮ್‌ನೊಂದಿಗೆ ಆಗುತ್ತಿದೆ. ಅಲ್ಲಾಹನು ಈ ಸಂಬಂಧವನ್ನು ಮತ್ತು ಇತರ ಐದು ವೈವಾಹಿಕ ಸಂಬಂಧಗಳನ್ನು ತನ್ನ ಕೃಪೆಯಿಂದ ಸಂತೋಷದ ವಾರಸುದಾರರನ್ನಾಗಿ ಮಾಡಲಿ. ನಿಕಾಹ್ ಉಭಯ ವ್ಯಕ್ತಿಗಳಿಗೂ ಅಹ್ಮದಿಯ್ಯತಿಗೂ ಒಳ್ಳೆಯದು ಮಾಡಲಿ. ಯಥಾರ್ಥ ಉದ್ದೇಶ ಇಸ್ಲಾಮಿನ ಏಳಿಗೆಯಾಗಿದೆ. ಒಂದು ದೀರ್ಘವಾದ ಕಠಿಣ ಪರಿಶ್ರಮದ ನಂತರ ಇಸ್ಲಾಮಿನ ಮಾರ್ಗದಲ್ಲಿ ಕೊನೆಯ ಮತ್ತು ಅಂತಿಮ ವಿಜಯ ಪಡೆಯಬೇಕಾಗಿದೆ. ಆದ್ದರಿಂದ ಒಂದರ ನಂತರ ಮತ್ತೊಂದು ಪೀಳಿಗೆಯ ಸರಿಯಾದ ತರಬೇತಿ ಆಗಬೇಕಾದದ್ದು ಮತ್ತು ಅವರಿಗೆ ಸರಿಯಾದ ಬುದ್ಧಿ ಇರಬೇಕಾದದ್ದು ಆವಶ್ಯ. ಅಲ್ಲಾಹನ ಕೃಪೆ ಇಲ್ಲದಿದ್ದರೆ ಮನುಷ್ಯನ ಎಲ್ಲ ಪ್ರಯತ್ನಗಳು ವ್ಯರ್ಥ ಮತ್ತು ಪರಿಣಾಮ ರಹಿತವಾಗಿರುವುದು. ಒಟ್ಟಿನಲ್ಲಿ ನಾವು ದುಆ ಮಾಡುತ್ತೇವೆ. ಈ ಸಂಬಂಧದಲ್ಲಿ ಮತ್ತು ಜಮಾಅತಿನಲ್ಲಿ ಮುಂಚೆಯೇ ಆಗಿರುವ ಮತ್ತು ಆಗಲಿರುವ ಸಂಬಂಧಗಳ ಪರಿಣಾಮವಾಗಿ ಅಲ್ಲಾಹನ ಕೃಪೆಯಿಂದ ಇಸ್ಲಾಮಿನ ಸುದೃಢತೆ ಉಂಟಾಗಲಿ.

ಸಾಹಿಬ್‌ಝಾದಿ ಅಮತುನ್ನೂರ್ ಸಾಹಿಬರಿಗೆ ಜಮಾಅತಿನ ಸೇವೆ ನಡೆಸುವ ಸೌಭಾಗ್ಯ ಲಭಿಸಿತು. ಅಮೇರಿಕದ ನ್ಯಾಶನಲ್ ಸೆಕ್ರೆಟರಿ ತರ್‌ಬಿಯತ್ ಆಗಿದ್ದರು. ಅಮೇರಿಕದ ನ್ಯಾಶನಲ್ ನಾಇಬ್ ಸದರ್ ಆಗಿದ್ದರು. ವಾಶಿಂಗ್‌ಟನಿನ ಲೋಕಲ್ ಸದರ್ ಲಜ್ನ ಆಗಿದ್ದರು. ಹಲವು ಕಮಿಟಿಗಳ ಮೆಂಬರ್ ಆಗಿದ್ದರು. ಅವರ ಹಿರಿಯ ಮಗಳಾದ ಅಮತುಲ್ ಮುಜೀಬ್ ಹೇಳುತ್ತಾರೆ: ಸದಾ ದೀನಿಗೆ ಲೌಕಿಕತೆ ಮೇಲೆ ಆದ್ಯತೆ ನೀಡಿದ್ದರು. ಜನರೊಂದಿಗೆ ಸಹಾನುಭೂತಿಯಿಂದ ಇರುತ್ತಿದ್ದರು. ಯಾರಿಗಾದರೂ ಸಹಾಯ ಮಾಡಲು ತಾಯಿಗೆ ಸಾಧ್ಯವಿದ್ದರೂ ಅಸಾಧಾರಣವಾದ ರೀತಿಯಲ್ಲ ಸಹಾಯ ಮಾಡುತ್ತಿದ್ದರು. ತನ್ನ ಆರಾಧನೆಯ ಬಗ್ಗೆ ಬಹಳ ಹೆಚ್ಚಾಗಿ ಗಮನವಹಿಸುತ್ತಿದ್ದರು. ಐದು ಹೊತ್ತಿನ ನಮಾಝ್‌ಗಳಲ್ಲದೆ ರಾತ್ರಿ ಸಮಯ ನಾನು ಕಣ್ಣು ತೆರೆಯುವಾಗಲೆಲ್ಲ ತಹಜ್ಜುದ್ ನಮಾಝ್ ಅನುಷ್ಠಿಸುವುದಾಗಿ ಕಂಡಿದ್ದೇನೆ. ಅಮತುನ್ನೂರ್ ಸಾಹಿಬರ ಪತಿ ಒಂದು ಅಪಘಾತದಲ್ಲಿ ಮೃತಪಟ್ಟಿದ್ದರು. ಪತಿಯ ನಿಧನದ ನಂತರ ಇಪ್ಪತ್ತು ವರ್ಷ ವಿಧವೆಯಾಗಿ ಕಳೆದರು. ಆ ಸ್ಥಿತಿಯಲ್ಲೂ ಅವರು ಅಲ್ಲಾಹನ ಭರವಸೆಯನ್ನು ಬಹಳವಾಗಿ ಹೊಂದಿದ್ದರು. ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ಗುಣ ಬಹಳ ಇತ್ತು. ಅವರು ಯಾವಾಗಲೂ ಹೀಗೆ ಹೇಳುತ್ತಿದ್ದರು: ಅಲ್ಲಾಹನ ಔದಾರ್ಯ ಮತ್ತು ಕೃಪೆ ನಮ್ಮ ಮೇಲೆ ತುಂಬ ಇದೆ. ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರೆ ಹೆಚ್ಚಾಗಿ ನೀಡುವನು ಎಂದು ಅಲ್ಲಾಹನು ವಾಗ್ದಾನ ನೀಡಿರುವನು. ಆದ್ದರಿಂದ

ಸದಾ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ಹೃದಯವನ್ನು ವಿಶಾಲವಾಗಿ ಇರಿಸುವುದು, ಅತಿಥಿ ಸತ್ಕಾರ ಮಾಡುವುದು, ಜನರಿಗಾಗಿ ಯಥಾರ್ಥ ಸಹಾನುಭೂತಿಯನ್ನು ತೋರಿಸುವುದು ಅವರ ಗುಣವಾಗಿತ್ತು. ನನ್ನ ತಾಯಿಯ ನಾಲಗೆಯಿಂದ ಅನೇಕ ಬಾರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ವಾಕ್ಯವನ್ನು ಕೇಳಿದ್ದೇನೆ: ಸಂಬಂಧ ಸ್ಥಾಪಿಸುವುದು ಎಂದರೆ, ನಿಮ್ಮೊಂದಿಗೆ ಸಂಬಂಧ ಸ್ಥಾಪಿಸಿದರೆ ಮಾತ್ರ ಸಂಬಂಧವನ್ನು ಸ್ಥಾಪಿಸುವುದಲ್ಲ, ಬದಲಾಗಿ ಸಂಬಂಧ ಮುರಿಯುವವರೊಡನೆ ಕೂಡ ಸಂಬಂಧ ಸ್ಥಾಪಿಸಬೇಕು. ಪ್ರತಿಯೊಬ್ಬರಲ್ಲಿ ಒಳಿತನ್ನು ಹುಡುಕುತ್ತಿದ್ದರು ಎಂಬುದು ಅವರ ಎಲ್ಲ ಸಂಬಂಧದಲ್ಲಿ ನಾನು ನೋಡಿದ ಸಂಬಂಧವಾಗಿತ್ತು. ಸಂಬಂಧಿಕರ, ಜಮಾಅತಿನ ಜನರ ಮತ್ತು ನೆರೆಕರೆಯವರ ಕಾಳಜಿ ವಹಿಸುತ್ತಿದ್ದರು. ಮಸೀದಿಯಲ್ಲಿ ಯಾರಾದರೂ ಹೊಸ ಅತಿಥಿ ಬಂದರೆ ಅವರನ್ನು ಹುಡುಕಿ ಅವರೊಂದಿಗೆ ಮಾತನಾಡುತ್ತಿದ್ದರು. ಅವರನ್ನು ಸ್ವಾಗತಿಸುತ್ತಿದ್ದರು. ಸ್ನೇಹಮಯಿ ಸ್ತ್ರೀಯಾಗಿದ್ದರು ಎಂದು ಅವರ ಬಗ್ಗೆ ಹಲವರು ಹೇಳಿರುವರು. ಅವರ ಎರಡನೇ ಮಗಳು ಸಹ ಬರೆದಿರುವರು: ನವ ಅಹ್ಮದಿಯರೊಂದಿಗೆ ಬಹಳ ಪ್ರೀತಿಯ ಸಂಬಂಧವನ್ನು ಹೊಂದಿದ್ದರು. ಜನರು ಸಹ ಅವರನ್ನು ಬಹಳ ಪ್ರೀತಿಸುತ್ತಿದ್ದರು. ಪ್ರತಿಯೊಬ್ಬರನ್ನು ಸಹಾಯ ಮಾಡಲು ಬಯಸುತ್ತಿದ್ದರು. ಯಾರನ್ನಾದರೂ ಭೇಟಿಯಾದರೆ, ಅವರ ಆವಶ್ಯಕತೆಯನ್ನು ಪೂರೈಸಲು ಸಾಧ್ಯವಾಗದೇ ಇರಬಾರದು ಎಂಬ ಚಿಂತೆಯಿತ್ತು. ಅವರ ಹಿರಿಯ ಸಹೋದರಿಯಾದ ಅಮತುಲ್ ಬಸೀರ್ ಸಾಹಿಬ ಬರೆಯುತ್ತಾರೆ: ಆಫ್ರಿಕನ್ ಅಮೇರಿಕನ್ ಸ್ತ್ರೀಯಾದ ಸಿಸ್ಟರ್ ಶಕೂರ ಎಂಬವರು ಇದ್ದಾರೆ. ಅವರು ಹಜ್ಜಿಗೆ ಹೋದಾಗ, ಅಲ್ಲಿ ಅವರು ಒಂದು ಕನಸಿನಲ್ಲಿ ಅಮತುನ್ನೂರ್ ಸಾಹಿಬ್‌ರ ಮನೆ ಮಕ್ಕದಲ್ಲಿ ಇರುವುದಾಗಿ ಕಂಡರು. ಆ ಕನಸಿನ ಬಗ್ಗೆ ಅವರೊಡನೆ ಹೇಳಿದಾಗ, ಅವರು ಹೇಳಿದರು, ಇದರ ಅರ್ಥವೇನೆಂದರೆ, ನೀವು ನನ್ನ ಬಳಿ ಇರುವಿ ಎಂದಾಗಿದೆ. ಅದರಂತೆ ಸಿಸ್ಟರ್ ಶಕೂರ್ 18 ವರ್ಷಗಳ ಕಾಲ ಅಮನ್ನೂರ್ ಸಾಹಿಬರೊಂದಿಗೆ ಇದ್ದರು. ಎಂಟು ವರ್ಷಗಳಷ್ಟು ಕಾಲ ಹಾಸಿಗೆಯಲ್ಲೇ ರೋಗಿಯಾಗಿ ಸಿಸ್ಟರ್ ಶಕೂರ್ ಇದ್ದರು. ಕಣ್ಣಿನ ದೃಷ್ಟಿ ಕೂಡ ಹೊರಟುಹೋಗಿತ್ತು. ಅವರನ್ನು ಅಮತನ್ನೂರ್ ಸಾಹಿಬ ಚೆನ್ನಾಗಿ ನೋಡಿದರು.

ತಬ್ಲೀಗ್ ಮಾಡುವ ಆಸಕ್ತಿಯನ್ನು ಹೊಂದಿದ್ದರು. ಯಾವುದಾದರೂ ರೀತಿಯಲ್ಲಿ ಜಮಾಅತಿನ ಬಗ್ಗೆ ಹೇಳಲು ಪ್ರಯತ್ನಿಸುತ್ತಿದ್ದರು. ಪಾಕಿಸ್ತಾನದ ಯಾವ ಜಾಗದಿಂದ ಬಂದಿರುವಿರಿ ಎಂದು ಯಾರಾದರೂ ಕೇಳಿದರೆ, ಸದಾ ರಬ್ವದ ಹೆಸರನ್ನು ಹೇಳುತ್ತಿದ್ದರು. ಹೀಗೆ ಮಾತು ಶುರುವಾಗುತ್ತಿತ್ತು. ಯಹೂದಿ ಧರ್ಮದ ಒಂದು ಕುಟುಂಬಕ್ಕೆ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ಸಿಕ್ಕಿತ್ತು. ಆ ಕುಟುಂಬದಲ್ಲಿ ಒಬ್ಬ ಸ್ತ್ರೀಯ ಹೆಸರು ರುಖಿಯ ಅಸದ್ ಎಂದಾಗಿದೆ. ಅವರು ಅಮೇರಿಕದ ನ್ಯಾಶನಲ್ ಆಮಿಲದಲ್ಲೂ ಇದ್ದರು. ಅವರು ಹೇಳುತ್ತಾರೆ: ಅಮತನ್ನೂರ್ ಸಾಹಿಬ ಬಹಳ ಉತ್ತಮ ಸ್ವಭಾವದ ಸ್ತ್ರೀಯಾಗಿದ್ದರು. ಅವರಿಂದ ಹಲವಾರು ಜನರು ಪ್ರಯೋಜನ ಪಡೆದರು. ಅವರ ಸಹವಾಸದ ಸೌಭಾಗ್ಯ ಸಿಕ್ಕಿದ ಪ್ರತಿಯೊಬ್ಬರು ಅವರ ಶ್ರೇಷ್ಠತೆಯ ಬಗ್ಗೆ ಶ್ಲಾಘಿಸುತ್ತಾರೆ. ಅವರು ತಮ್ಮ ಮಾದರಿಯಿಂದ ತನ್ನ ಜೀವಿತವನ್ನು ಇಸ್ಲಾಂ ಮತ್ತು ಅಹ್ಮದಿಯ್ಯತ್ ಪ್ರಕಾರ ಕಳೆದರು. ಅದರ ಕಾರಣದಿಂದ ಜನರು ಅವರಿಂದ ಪ್ರಭಾವಿತರಾಗಿದ್ದರು. ಅವರು ಜನರಿಗೆ ಮಾದರಿಯಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಲಿಖಿತಗಳ ಬೆಳಕಿನಲ್ಲಿ ಲಜ್ನಗಳ ತರಬೇತಿಗಾಗಿ ಅವರು ತಮ್ಮ ಜೀವಿತವನ್ನು ಸಮರ್ಪಿಸಿದರು. ಅವರು ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಸ್ವಯಂ ಸೇವಕರಾಗಿ ಸದಾ ಸೇವೆ ಸಲ್ಲಿಸಿದರು. ಸಹನೆ, ಸ್ಥೈರ್ಯ ಮತ್ತು ದೃಢನಿರ್ಧಾರದೊಂದಿಗೆ ಕಷ್ಟತೆಗಳನ್ನು ಮತ್ತು ತೊಂದರೆಗಳನ್ನು ಎದುರಿಸಿದರು. ಈ ರೀತಿಯಲ್ಲಿ ಇತರರಿಗೂ ಮಾದರಿಯಾಗಿದ್ದರು. ಪ್ರೀತಿ ಮತ್ತು ನಿಷ್ಠೆಯಿಂದ ತಬ್ಲೀಗ್ ಮಾಡುತ್ತಿದ್ದರು. ಹೊಸ ಅತಿಥಿಗಳ ಕಾಳಜಿ ವಹಿಸುವುದರಲ್ಲಿ ಎಲ್ಲರಿಗಿಂತ ಮುಂದಿದ್ದರು. ಯುವತಿಗಳಿಗೂ ಹಿರಿವಯಸ್ಸಿನ ಸ್ತ್ರೀಯರಿಗೂ ಮಾದರಿಯಾಗಿದ್ದರು. ಮತ್ತೆ ಬರೆಯುತ್ತಾರೆ: ಜನಸೇವೆ ಮಾಡಬೇಕು, ಬಡವರ ಮತ್ತು ನಿರ್ಗತಿಕರ ಸಹಾಯ ಮಾಡಬೇಕು ಎಂದೆಲ್ಲ ನಾವು ಹೇಳುತ್ತೇವೆ. ಆದರೆ ಅಮತುನ್ನೂರ್ ಸಾಹಿಬರು ಸಂಬಂಧಿಕರಲ್ಲದ ವ್ಯಕ್ತಿಗಳ ಕೂಡ ಸೇವೆಯನ್ನು ಅನೇಕ ವರ್ಷಗಳಿಂದ ಸೇವೆ ಮಾಡುತ್ತಿದ್ದರು. ಅದೇ ರೀತಿಯಲ್ಲಿ ಕೆಲವು ಮಹಿಳೆಯರು ವಿಶೇಷವಾಗಿ ಆಫ್ರಿಕನ್ ಅಮೇರಿಕನ್ ಮಹಿಳೆಯರು ಬರೆಯುತ್ತಾರೆ: ನಮ್ಮೊಂದಿಗೆ ಅವರು ಬಹಳ ಪ್ರೀತಿಯ ಸಂಬಂಧವನ್ನು ಇರಿಸಿದ್ದರು. ಅಹ್ಮದಿಯ್ಯತ್ತಿನ ಅಧ್ಯಾಪನೆಗಳ ಬಗ್ಗೆ ಬಹಳಷ್ಟು ಸಂಗತಿಗಳನ್ನು ನಮಗೆ ಹೇಳಿಕೊಟ್ಟಿದ್ದರು. ಅಲ್ಲಾಹನು ಅವರ ಮಕ್ಕಳಿಗೂ ಅವರ ಸತ್ಕರ್ಮಗಳನ್ನು ಜಾರಿಯಲ್ಲಿರಿಸಲು ಮತ್ತು ಖಿಲಾಫತಿನೊಂದಿಗೆ ಸಂಬಂಧವಿರಿಸಲು ಸೌಭಾಗ್ಯ ನೀಡಲಿ. ಖಿಲಾಫತಿನೊಂದಿಗೆ ಅವರು ನಿಷ್ಠೆಯ ಸಂಬಂಧವನ್ನು ಇರಿಸಿದ್ದರು. ಪರಿಪೂರ್ಣ ಅನುಸರಣೆ ಮತ್ತು ವಿನಯದ ಮಾದರಿಯನ್ನು ತೋರಿಸಿದ್ದನ್ನು ನಾನು ಸಹ ನೋಡಿದ್ದೇನೆ. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಪ್ರಸ್ತಾಪ ಹಿಫಾಝ್ಜತೇ ಖಾಸಿನ ಆಫೀಸರ್ ಆದ ಸನ್ಮಾನ್ಯ ನಾಸಿರ್ ಅಹ್ಮದ್ ಖಾನ್ ಬಹಾದುರ್ ಶೇರ್ ಸಾಹಿಬ್‌ರ ಪತ್ನಿಯಾದ ಬಿಸ್ಮಿಲ್ಲಾಹ್ ಬೇಗಂ ಸಾಹಿಬರದ್ದಾಗಿದೆ. ಜರ್ಮನಿಯಲ್ಲಿ ಜೂನ್ 14ರಂದು 84ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯಾದ ಹಝ್ರತ್ ಚೌಧರಿ ಮಝ್ಹರುಲ್ ಹಖ್ ಖಾನ್ ಸಾಹಿಬ್‌ರ ಮೂಲಕ ಬಂದಿತ್ತು. ಖಾದಿಯಾನಿನ ಬೋರ್ಡಿಂಗ್ ಸ್ಕೂಲಿನಲ್ಲೂ ಕೆಲಸ ಮಾಡಲು ಅವರಿಗೆ ಸೌಭಾಗ್ಯ ಸಿಕ್ಕಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅವರ ಒಂದು ನಿಲುವಂಗಿಯನ್ನು ಅವರಿಗೆ ಕಾಣಿಕೆಯಾಗಿ ನೀಡಿದ್ದರು. ಅವರಿಗೆ ಐವರು ಪುತ್ರಿಯರು ಮತ್ತು ಇಬ್ಬರು ಪುತ್ರರು ಇರುವರು. ಅವರ ಒಬ್ಬ ಮಗನಾದ ಮಹ್ಮೂದ್ ಸಾಹಿಬ್ ಫಿಜಿಯಲ್ಲಿ ಮುರಬ್ಬಿ ಮತ್ತು ಮಿಶನರಿ ಇಂಚಾರ್ಜ್ ಆಗಿರುವರು. ಅಮೀರ್ ಜಮಾಅತ್ ಸಹ ಆಗಿರುವರು. ಅವರು ಬರೆಯುತ್ತಾರೆ: ತಂದೆಯ ನಿಧನದ ನಂತರ ಭೂಸೊತ್ತಿನಿಂದ ಬರುವ ಆಮದಿನಿಂದ ಮೊತ್ತಮೊದಲು ಚಂದಾವನ್ನು ನೀಡುತ್ತಿದ್ದರು. ತಂದೆಯರ ಪೆನ್ಶನಿನ ಹಣವನ್ನು ಒಟ್ಟುಗೂಡಿಸಿ ಆ ಹಣದಿಂದ ತಾಹಿರಾಬಾದಿನಲ್ಲಿ ಮಸೀದಿಯನ್ನು ನಿರ್ಮಿಸಿದರು. ಖಿಲಾಫತಿನೊಂದಿಗೆ ಅಂಟಿಕೊಂಡಿರಲು ಅವರು ನಮಗೆ ಸದಾ ಉಪದೇಶಿಸುತ್ತಿದ್ದರು. ತಂದೆಯ ನಿಧನದ ನಂತರ ನಮಗೆಲ್ಲರಿಗೂ ತಂದೆ ತಾಯಿ ಇಬ್ಬರ ಪ್ರೀತಿಯನ್ನೂ ತಾಯಿ ನೀಡಿದರು. ತಂದೆಯ ಕೊರತೆಯನ್ನು ಅನುಭವಿಸುವಂತೆ ಯಾವತ್ತೂ ಮಾಡಿರಲಿಲ್ಲ. ಆಗ ನಾನು ಜಾಮಿಅ ಅಹ್ಮದಿಯದ ಮೊದಲ ವರ್ಷದಲ್ಲಿ ಇದ್ದೆನು. ಆಗ ನನ್ನೊಡನೆ ಹೆಚ್ಚಾಗಿ ಹೀಗೆ ಹೇಳುತ್ತಿದ್ದರು: ನೀನು ಧರ್ಮ ಸಿಪಾಯಿಯಾಗಿರುವಿಯಾ. ನೀನು ದೀನಿಗಾಗಿ ವಖ್ಫ್ ಮಾಡಿದ್ದೀಯ. ಖಲೀಫತುಲ್ ಮಸೀಹರು ಎಲ್ಲಿ ನಿಲ್ಲಿಸಿದರೂ ಅಲ್ಲಿ ನಿಲ್ಲಬೇಕು. ಕೊನೆಯ ತನಕ ಇಂತಹ ಮಾತುಗಳನ್ನು ಹೇಳುತ್ತಿದ್ದರು. ಅವರು ಬರೆಯುತ್ತಾರೆ: ಆರಂಭದಲ್ಲಿ ಆರಂಭದಲ್ಲಿ ನನ್ನ ಗ್ರಾಮದಿಂದ ನನ್ನ ತಂದೆ ಮಾತ್ರ ರಬ್ವಗೆ ಬಂದು ನೆಲೆಸಿದ್ದರು. ಆದ್ದರಿಂದ ನಮ್ಮ ಎಲ್ಲ ಸಂಬಂಧಿಕರು ಹೆಚ್ಚಾಗಿ ಗ್ರಾಮದಿಂದ ರಬ್ವಕ್ಕೆ ಬರುತ್ತಿದ್ದರು. ಅವರ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಬಹಳ ಸಂತೋಷದಿಂದ ಮಾಡುತ್ತಿದ್ದರು. ತಮ್ಮ ಶಕ್ತಿಗೆ ಮೀರಿ ಅತಿಥಿ ಸತ್ಕಾರ ಮಾಡುತ್ತಿದ್ದರು. ನೆರೆಕರೆಯವರ ಹಕ್ಕುಗಳ ಬಗ್ಗೆ ಗಮನವಹಿಸುವುದು ಅವರ ಗುಣವಾಗಿತ್ತು. ನನ್ನ ಸಹಪಾಠಿಗಳನ್ನು ಸಹ ತನ್ನ ಮಕ್ಕಳಂತೆ ಕಾಣುತ್ತಿದ್ದರು. ವಿದೇಶೀ ದೇಶಗಳಿಂದ ಬಂದು ಹೋಸ್ಟಲಿನಲ್ಲಿ ಇರುವ ವಿದ್ಯಾರ್ಥಿಗಳನ್ನು ಮನೆಗೆ ಕರೆದುಕೊಂಡು ಬರಲು ಯಾವಾಗಲೂ ಹೇಳುತ್ತಿದ್ದರು. ತಾಯಿಯ ವಾತ್ಸಲ್ಯ ಹೆಚ್ಚಾಗಿ ಜಾಮಿಅ ವಿದ್ಯಾರ್ಥಿಗಳಿಗೆ ಲಭಿಸಿತ್ತು ಎಂಬುದಕ್ಕೆ ಅನೇಕ ಮುರಬ್ಬಿಗಳು ಸಾಕ್ಷಿಗಳಾಗಿರುವರು. ಅವರ ವಾತ್ಸಲ್ಯಕ್ಕೆ ಪಾಕಿಸ್ತಾನದ ವಿದ್ಯಾರ್ಥಿಗಳು ಅಲ್ಲದೆ ಇಂಡೋನೇಶ್ಯ ಮತ್ತು ಆಫ್ರಿಕದ ವಿದ್ಯಾರ್ಥಿಗಳು ಸಹ ಭಾಗಿಯಾಗಿರುವರು. ಅವರ ಬಳಿ ಎಷ್ಟು ಹಣವಿದ್ದರೂ ಅದನ್ನು ವಿತರಿಸುತ್ತಿದ್ದರು ಅಥವಾ ಚಂದಾವಾಗಿ ನೀಡುತ್ತಿದ್ದರು. ಫಿಜಿಯಲ್ಲಿ ಮುಬಲ್ಲಿಗ್ ಮತ್ತು ಅಮೀರ್ ಆಗಿರುವ ಮಗನಿಗೆ ಕರ್ಮ ಮೈದಾನದಲ್ಲಿ ಇರುವ ಕಾರಣದಿಂದ ತಾಯಿಯ ಜನಾಝದಲ್ಲಿ ಭಾಗಿಯಾಗಲು ಸಾಧ್ಯವಾಗಲಿಲ್ಲ. ಅಲ್ಲಾಹನು ಅವರಿಗೂ ಸಹನೆ ಮತ್ತು ಸಮಾಧಾನ ನೀಡಲಿ. ಅವರ ಇತರ ಮಕ್ಕಳಿಗೂ ಸಹನೆ ನೀಡಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ರಾವಲ್ಪಿಂಡಿಯ ಚೌಧರಿ ಅಬ್ದುಲ್‌ಗ್ಗನಿ ಸಾಹಿಬ್‌ರ ಮಗನಾದ ಸನ್ಮಾನ್ಯ ಕರ್ನಲ್ ಜಾವೇದ್ ರುಶ್ದಿ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳ ಹಿಂದೆ ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ದಿವಂಗತರು ಮೂಸಿಯಾಗಿದ್ದರು. ಸೈನ್ಯದಿಂದ ನಿವೃತ್ತರಾದ ನಂತರ ಸದಾ ಜಮಾಅತಿನ ಸೇವೆಗಳಲ್ಲಿ ನಿರತರಾಗಿದ್ದರು. ಸೆಕ್ರಟರಿ ತಾಲೀಂ, ಸೆಕ್ರಟರಿ ವಖ್ಫೇ ಜದೀದ್, ಸೆಕ್ರಟರಿ ರಿಶ್ತ ನಾತ ಅಲ್ಲದೇ ಹಲ್ಕದ ಸೆಕ್ರಟರಿ ವಸಿಯ್ಯತ್ ಆಗಿ ಸಹ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಮೂರು ಬಾರಿ ಸೇಟಲೈಟ್ ಟೌನ್ ಮತ್ತು ರಾವಲ್ಪಿಂಡಿಯ ಹಲ್ಕ ಸದರ್ ಆಗಿದ್ದರು. ಬಹಳ ದುಆ ಮಾಡುವ ವ್ಯಕ್ತಿಯಾಗಿದ್ದರು. ಜನರಿಗೆ ರಹಸ್ಯವಾಗಿ ಸಾಂಪತ್ತಿಕ ಸಹಾಯವನ್ನು ಮಾಡುತ್ತಿದ್ದರು. ಸಹಾನುಭೂತಿಯುಳ್ಳವರಾಗಿದ್ದರು. ಸಂಬಂಧಿಕರು,

ನೆರೆಕರೆಯವರು ಮತ್ತು ಇತರ ಬಾಂಧವರೊಂದಿಗೆ ಸದಾ ಕಷ್ಟದ ಸ್ಥಿತಿಯಲ್ಲಿ ಸಹಾಯ ಮತ್ತು ಮಾರ್ಗದರ್ಶನ ಮಾಡುತ್ತಿದ್ದರು. ಒಬ್ಬ ಒಳ್ಳೆಯ ಸಂಘಟಕ ಮತ್ತು ಬುದ್ಧಿಯುಳ್ಳ ವ್ಯಕ್ತಿಯಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಇವರೆಲ್ಲರ ಜನಾಝ ಜುಮಾ ನಮಾಝಿನ ನಂತರ ನಿರ್ವಹಿಸುವೆನು. **ಇನ್‌ಶಾ ಅಲ್ಲಾಹ್**.

***************

*(ಪುಟ ಸಂಖ್ಯೆ* **01ರ** *ಉಳಿದ ಭಾಗ)*

ಇಲ್ಲಿ ನೆನಪಿಡಬೇಕಾದ ವಿಷಯವೆಂದರೆ ನನ್ನ ಮೇಲೆ ಮತ್ತು ನನ್ನ ಜಮಾಅತಿನ ಮೇಲೆ. ನಾವು ರಸೂಲುಲ್ಲಾಹ್(ಸ) ರವರನ್ನು ಖಾತಮನ್ನಬಿಯೀನ್ ಎಂದು ನಂಬುವುದಿಲ್ಲ ಎಂಬ ಆರೋಪವನ್ನು ಮಾಡುತ್ತಾರೆ. ಇದು ನಮ್ಮ ಮೇಲೆ ಮಾಡುವ ಘೋರವಾದ ಅಪವಾದವಾಗಿದೆ. ನಾವು ಯಾವ ರೀತಿ ದೃಢ ನಿಶ್ಚಯವಾಗಿ, ಪೂರ್ಣ ಪ್ರಜ್ಞೆಯಿಂದ ಮತ್ತು ಹಾರ್ಧಿಕವಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಖಾತಮಲ್ ಅಂಬಿಯಾ ಎಂದು ನಂಬುತ್ತೇವೆ ಮತ್ತು ದೃಢ ನಿಶ್ಚಯ ಹೊಂದಿದ್ದೇವೆ. ಅದರ ಲಕ್ಷಾಂತರ ಭಾಗವು ಸಹ ಅವರು ನಂಬುವುದಿಲ್ಲ. ಅವರಲ್ಲಿ ಅಂತಹ ಸಾಮರ್ಥ್ಯವೇ ಇಲ್ಲ ಅವರು ಅದರ ವಾಸ್ತವ ಮರ್ಮ, ಖಾತಮಲ್ ಅಂಬಿಯಾ(ಸ) ರವರ "ಅಂತ್ಯ ಪ್ರವಾದಿಯ" ಅರ್ಥ ತಿಳಿದಿರುವುದಿಲ್ಲ. ಅವರು ಕೇವಲ ಅಜ್ಜ ತಾತರಿಂದ ಒಂದು ಪದ ಕೇಳಿಕೊಂಡಿದ್ದಾರೆ. ಆದರೆ ಅದರ ವಾಸ್ತವದಿಂದ ಅಜ್ಞಾನಿಯಾಗಿರುವರು. ಖಾತಮನ್ನಬಿಯೀನ್ ಅರ್ಥವೇನು? ಅದರ ತಾತ್ಪರ್ಯವೇನು ಮತ್ತು ಅದರ ಮೇಲೆ ವಿಶ್ವಾಸ ತರುವ ಅಗತ್ಯವೇನು? ತಿಳಿದಿರುವುದಿಲ್ಲ. ಆದರೆ ನಾವು ಪೂರ್ಣ ಪ್ರಜ್ಞೆಯಿಂದ (ಅಲ್ಲಾಹನು ಅದನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ) ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಖಾತಮುಲ್ ಅಂಬಿಯಾ ಎಂದು ದೃಢವಾಗಿ ನಂಬಿರುತ್ತೇವೆ. ಅಲ್ಲಾಹನು ನಮ್ಮ ಮೇಲೆ ಯಾವ ರೀತಿಯಲ್ಲಿ ಅದರ ಯಥಾರ್ಥತೆಯನ್ನು ದಯಪಾಲಿಸಿರುವನು ಎಂದರೆ, ಅದರ ಆಧ್ಯಾತ್ಮಿಕ ಜ್ಞಾನದ ರಸದೌತಣ ನಾವು ಪಡೆದಿರುತ್ತೇವೆ. ಅದರ ಒಂದು ವಿಶೇಷವಾದ ರುಚಿ ನಾವು ಪಡೆದಿರುತ್ತೇವೆ. ಅದನ್ನು ಯಾರು ಅಂದಾಜಿಸಲು ಸಾಧ್ಯವಿಲ್ಲ. ಕೇವಲ ಈ ಆಧ್ಯಾತ್ಮಿಕ ಸರೋವರದಿಂದ ಮಿಂದವರು ಮಾತ್ರ ಅರಿಯಬಲ್ಲರು.

ಲೌಕಿಕ ಉದಾಹರಣೆಯಿಂದ ನಿಮಗೆ ಹೀಗೆ ತಿಳಿಸಬಹುದು. ಯಾವ ರೀತಿ ಹಿಲಾಲ ಚಂದ್ರ (ಅಂದರೆ ಪ್ರಥಮ ರಾತ್ರಿಯ ಚಂದ್ರ) ಪ್ರಾರಂಭಗೊಂಡು 14ನೇ ತಾರಶೀಖಿಗೆ ಬಂದು ಅದರ ಮಹಾನತೆ ಗೋಚರವಾಗುತ್ತದೆ. ಅದನ್ನು ಬದರ್ ಎಂದು ಕರೆಯಲಾಗುತ್ತದೆ. ಅದೇ ರೀತಿ ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ಪ್ರವಾದಿತ್ವದ ಮಹಿಮೆಗಳು ಅಂತ್ಯವಾಗಿವೆ. ಪ್ರವಾದಿತ್ವ ಬಲಾತ್ಕಾರದಿಂದ ಅಂತ್ಯವಾಗಿದೆ ಎಂಬ ವಿಶ್ವಾಸ ಹೊಂದಿದವರು ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಯೂನುಸ್ ಬಿನ್ ಮತಾಕ್ಕಿಂತ ಹೆಚ್ಚಿನ ಸ್ಥಾನ ನೀಡಬಯಸುವುದಿಲ್ಲ. ಅವರು ವಾಸ್ತವದಲ್ಲಿ ಅದರ ಅರ್ಥವೇ ಮಾಡಿಕೊಳ್ಳಲಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ರವರ ಅನುಗ್ರಹಗಳು ಮತ್ತು ಮಹಿಮೆಗಳ ಯಾವ ಜ್ಞಾನವು ಅವರಿಗಿಲ್ಲ. ತನ್ನಲ್ಲಿ ಅಂತಹ ಅಲ್ಪಜ್ಞಾನ ಮತ್ತು ಭಾವನೆಯಿಟ್ಟುಕೊಂಡು ನಮಗೆ ಹೇಳುತ್ತಾರೆ. ಇವರು ಖಾತಮುನ್ನಬಿಯೀನ್ ಎಂದು ನಂಬದವರಾಗಿದಾರೆ! ನಾನು ಇಂತಹ ರೋಗಿಗಳ ಮೇಲೆ ಏನು ಹೇಳಬಲ್ಲೆ ಮತ್ತು ಯಾವ ರೀತಿ ಅವರ ಮೇಲೆ ವಿಷಾದ ವ್ಯಕ್ತಪಡಿಸಬೇಕು. ಅವರ ಅವಸ್ಥೆ ಈ ರೀತಿಯಲ್ಲಿ ದುರ್ಬಲವಿರುತ್ತಿದ್ದರೆ ಅವರು ಇಸ್ಲಾಮಿನ ಯಥಾರ್ಥತೆಯಿಂದ ದೂರವಾಗುತ್ತಿರಲಿಲ್ಲ. ನನ್ನ ಬರುವಿಕೆಯ ಅಗತ್ಯವಾದರೇನಿತ್ತು? ಈ ಜನರ ವಿಶ್ವಾಸಗಳು ಕುಂದಿ ಹೋಗಿವೆ. ಮತ್ತು ಅವರು ಇಸ್ಲಾಂ ಧರ್ಮದ ವಾಸ್ತವ, ಉದ್ದೇಶಗಳನ್ನು ಅರಿಯದವರಾಗಿದ್ದಾರೆ. ಇಲ್ಲವಾಗಿದ್ದಲ್ಲಿ ಅವರು ಸತ್ಯವನ್ನು ವಿರೋಧಿಸುತ್ತಿರಲಿಲ್ಲ. ಅದು ಅವರನ್ನು ಅವಿಶ್ವಾಸಕ್ಕೆ ತಳ್ಳಿದೆ.

**(ಮಲ್ಫೂಝಾತ್ ಸಂ 1, ಪುಟ 311–313, ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ* **02ರ** *ಉಳಿದ ಭಾಗ)*

ಬದಲು ಸಿದ್ಧಹಸ್ತನಾಗಿ ಆಣೆ ವಹಿಸುತ್ತಾನೆ. ಬ್ರಿಟಿಷ್ ಸರ್ಕಾರದ ಎಲ್ಲಾ ಹುದ್ದೆದಾರರು, ಸಂಸತ್ ಸದಸ್ಯರು, ಗೌವರ್‌ನರ್ ಜನರಲ್ ಸಹ ಪ್ರಮಾಣವಚನ ಸ್ವೀಕಾರ ನಂತರವೇ ತಮ್ಮ ಹುದ್ದೆಗಳನ್ನು ಅಲಂಕರಿಸುತ್ತಾರೆ. ಹಾಗಾದರೆ ನಾವು ಇವರೆಲ್ಲರೂ ಇಂಜೀಲಿನ ಶಿಕ್ಷಣದಿಂದ ಅಜ್ಞಾನಿಗಳಾಗಿದ್ದಾರೆ ಎಂದು ಭಾವಿಸಬೇಕೆ? ಕೇವಲ ಆಥಮ ಸಾಹಿಬರೊಬ್ಬರೇ ಲೋಕದಲ್ಲಿ ಮಸೀಹರ ಪುರುಷರಾಗಿದಾರೆ. ಅವರು ಮಾತ್ರ ಹಝ್ರತ್ ಈಸಾ(ಅ) ರವರ ಶಿಕ್ಷಣದಲ್ಲಿ, ಪೌಲೂಸ್ ಪ್ರವಾದಿಗಳ ರೀತಿಯ ವಿಶ್ವಾಸ ಹೊಂದಿದವರಾಗಿದ್ದಾರೆ. ಇಂಜೀಲಿನ ದೃಷ್ಟಿಯಿಂದ ಆಣೆ ವಹಿಸುವುದು ನಿಜವಾಗಿಯೂ ನಿಷೇಧವಿದ್ದರೆ, ಆಗ ಆಥಮ ಸಾಹಿಬರ ವಿಶ್ವಾಸ ಪತ್ರಸ್ ಮತ್ತು ಪೌಲೂಸ್ ಪ್ರವಾದಿಯ ವಿಶ್ವಾಸಗಿಂತಲೂ ಮಿಗಿಲಾದುದು ಎನ್ನಬಹುದು. ಏಕೆಂದರೆ ಆಥಮ ಸಾಹಿಬರ ದೃಷ್ಟಿಯಲ್ಲಿ ಆಣೆ ವಹಿಸುವುದು ಅವಿಶ್ವಾಸವಾಗಿದೆ. ಆದರೆ ಮುಕ್ತಾಯ 27 ಅಧ್ಯಾಯ, 72 ಸ್ತರದಿಂದ ಸಾಬೀತಾಗುತ್ತದೆ. ಪತ್ರಸ್ ಶಿಷ್ಯನು ಸ್ವರ್ಗದ ಶೀಲಗ್ಯೆಯುವವರು ಸಹ ಈ ಅವಿಶ್ವಾಸದ ಪೈಕಿ ಭಯಪಡಲಿಲ್ಲ, ಯಾರ ಒತ್ತಾಯ ಕಂಡಿದ್ದರೂ ಸ್ವಯಂ ಆಣೆ ವಹಿಸಿಕೊಂಡರು. ಆದರೆ ಆಥಮ್ ಸಾಹಿಬರು ಹೇಳಬಹುದು. ಪತ್ರಸನು ನಿಷ್ಠಾವಂತನಾಗಿರಲಿಲ್ಲ. ಏಕೆಂದರೆ ಮಸೀಹನು ಅವನನ್ನು ಶೈತಾನ ಎಂಬ ಬಿರುದು ನೀಡಿದ್ದರು. ಆದರೆ ನಾನು ಸತ್ಯವಂತನಾಗಿರುವೆನು. ಪತ್ರಸನಿಗಿಂತ ಉತ್ತಮನು. ಆದುದರಿಂದ ಆಣೆ ವಹಿಸುವುದು ಅವಿಶ್ವಾಸ ಎಂದು ಭಾವಿಸುತ್ತೇನೆ. ಹಾಗಾದರೆ ಅವರ ಸೇವೆಯಲ್ಲಿ ನಿವೇದನೆಯಿದೆ. ನಿಮ್ಮ ಪೌಲೂಸ್ ಪ್ರವಾದಿಯು ಸಹ ಕ್ರೈಸ್ತರ ಮತಪ್ರಕಾರ ಅವರ ಸ್ಥಾನ ಮೂಸಾ(ಅ) ರವರಿಗಿಂತ ಹೆಚ್ಚಾಗಿದೆ. ಅವರನ್ನು ಸಹ ನೀವು ನಂಬುವುದಿಲ್ಲವೇ? ಆದರೂ ಸರಿ ನಿಮ್ಮ ಇಷ್ಟ. ಆಣೆ ಮಾಡಲು ಏನು ಪುರಾವೆಯಿದೆ ಎಂದು ಪ್ರಶ್ನೆ ಮಾಡಿದರೆ ಖರಿನಿತಿಯಾನ್ ಅಧ್ಯಾಯ 15, ಸೂಕ್ತ 131 ರನ್ನು ನೋಡಿಕೊಳ್ಳಿ. ಅದರಲ್ಲಿ ಪೌಲೂಸ್ ಸಾಹಿಬ್ ಹೇಳುತ್ತಾರೆ. ನನಗೆ ನಿಮ್ಮ ಗೌರವವಾದ ನಮ್ಮ ಮಸೀಹನ ಆಣೆಯಿದೆ. ನಾನು ದಿನನಿತ್ಯ ಮರಣ ಹೊಂದುತ್ತೇನೆ. ಈಗ ಓದುಗರೇ ಸರಿಯಾಗಿ ಯೋಚಿಸಿರಿ. ಯಾವ ಸ್ಥಿತಿಯಲ್ಲಿ ಪತ್ರಸ್ ಮತ್ತು ಪೌಲೂಸ್ ಆಣೆ ಮಾಡಿದ್ದಾರೆ ಮತ್ತು ಆಥಮ್ ಸಾಹಿಬ್ ಆಣೆ ಮಾಡುವುದು ಅವಿಶ್ವಾಸವೆನ್ನುತ್ತಾರೆ. ಅಂದರೆ ಅದನ್ನು ಧಾರ್ಮಿಕ ವಿಧಿನಿಯಮಕ್ಕೆ ಬಾಹಿರ ಅನ್ನಬೇಕೆ, ಹಾಗೆ ಮಾಡುವುದು ನಿಶ್ಚಿತವಾಗಿಯೂ ಅವಿಶ್ವಾಸವಾಗುತ್ತದೆ. ಅದರಿಂದ ಈ ಫಲಿತಾಂಶ ಹೊರಬಹುವುದಲ್ಲವೇ ಆಥಮ ಸಾಹಿಬರ ನುಡಿಯನ್ವಯ ಮಸೀಹನ ಎಲ್ಲಾ ಶಿಷ್ಯಂದಿರು ಮತ್ತು ಪೌಲೂಸ್ ಪ್ರವಾದಿ ಎಲ್ಲರೂ ಇಂಜೀಲ್ ನಿಷೇಧಿಗಳಾಗಿದ್ದಾರೆಯೇ? ಮತ್ತು ವಿಶ್ವಾಸದ ಎಲ್ಲೆ ಮೀರಿದವರಾಗಿದ್ದಾರೆಯೇ? ಏಕೆಂದರೆ ಅವರಲ್ಲಿ ಕೆಲವರು ಆಣೆ ಮಾಡಿದವರಾಗಿದ್ದಾರೆ ಮತ್ತು ಕೆಲವರು ಆ ಪ್ರಕಾರ ಅವಿಶ್ವಾಸ ಎಸಗಿದಂತಾಯಿತು. ಆಣೆ ಮಾಡುವವರಿಂದ ಪ್ರತ್ಯೇಕಗೊಳ್ಳಲಿಲ್ಲ. ಯಾವ ಆದೇಶಗಳನ್ನು ಧಿಕ್ಕರಿಸಲಿಲ್ಲ ಆದರೆ ಇಂದಿನವರೆಗೂ ಆಥಮ ಸಾಹಿಬರು ಹೊರತುಪಡಿಸಿ ಯಾವ ಕ್ರೈಸ್ತನಾದರೂ ಹಝ್ರತ್ ಮಸೀಹರ ಎಲ್ಲಾ ಶಿಷ್ಯಂದಿರು, ಪೌಲೂಸ್ ಪ್ರವಾದಿ ಒಳಗೊಂಡು ಸತ್ಯ ವಿಶ್ವಾಸದಿಂದ ವಂಚಿತರಾಗಿದ್ದರು. ಇಂಜೀಲಿನ ನಿಷೇಧಿಗಳಾಗಿದ್ದರು ಎಂಬುದು ಯಾವ ಪತ್ರಿಕೆಯಲ್ಲೂ ಪ್ರಕಟವಾಗಲಿಲ್ಲ. ಕೇವಲ 18 ವರ್ಷಗಳ ನಂತರ ಆಥಮ ಸಾಹಿಬರಿಗೆ ಈ ಜ್ಞಾನ ಉಂಟಾಯಿತು. ಅಕಟಾ! ಈ ಸಮುದಾಯದ ಸುಳ್ಳು ಮತ್ತು ತಂತ್ರಗಾರಿಕೆ ಎಲ್ಲಿಗೆ ಹೋಗಿ ಮುಟ್ಟಿದೆ. ತಮ್ಮ ಸ್ವಾರ್ಥಕ್ಕಾಗಿ ತಮ್ಮ ಪೂರ್ವ ಮಹಾತ್ಮರುಗಳನ್ನು ಸಹ ಅವಿಶ್ವಾಸಿ ಎನ್ನತೊಡಗಿದ್ದಾರೆ. ಆಥಮ ಸಾಹಿಬರು ತನ್ನ ಪ್ರಾಣ ಉಳಿಸಿಕೊಳ್ಳಲಿಕ್ಕಾಗಿ ಈ ನೆಪ ಮಾಡುತ್ತಿದ್ದಾರೆಂದರೆ ನನಗೆ ಭಯಯಿದೆ. ನಾನು ಸಾಯಬಹುದೆಂದು, ಆ ಪಕ್ಷದಲ್ಲಿ ಜನರಿಗೆ ಕೇವಲ ಇಷ್ಟೇ ಮನವರಿಕೆ ಆಗುತ್ತಿತ್ತು. ಈ ವ್ಯಕ್ತಿಯ ವಿಶ್ವಾಸ ಮಸೀಹನ ಶಕ್ತಿ ಮತ್ತು ವಿಧಿ ನಿಯಮಕ್ಕಿಂತ ದುರ್ಬಲವಾಗಿತ್ತು. ವಾಸ್ತವದಲ್ಲಿ ತನ್ನ ಮನಸ್ಸಿನಲ್ಲಿ ಅವರನ್ನು ಸರ್ವಶಕ್ತ ಎಂದು ಭಾವಿಸಿಲ್ಲ. ಆದರೆ ಆಥಮ ಸಾಹಿಬರ ಈ ನೆಪ ಆಣೆ ಮಾಡುವುದು ನಿಷಿದ್ಧವಿದೆ ಎಂಬುದು ಅಪ್ಪಟ ಸುಳ್ಳು ಮತ್ತು ಕೀಳುಮಟ್ಟದ್ದಾಗಿದೆ. ಅದರಿಂದ ಅವರ ಬಂಡವಾಳ ಬಯಲಾಗುತ್ತದೆ. ಏಕೆಂದರೆ ಈ ನೆಪ ಯಾರೂ ಸಹ ಮನ್ನಿಸುವುದಿಲ್ಲ. ಅದು ಕೇವಲ ಆಥಮ ಸಾಹಿಬರ ಪಾಲಿಗೆ ಬಂದಿದೆ. ಮತ್ತೆ ನನಗೆ ಅವರ ಈ ವಾದವು ಅಪ್ಪಟ ಸುಳ್ಳೆನಿಸುತ್ತದೆ. ಆಥಮ ಸಾಹಿಬರು ಇಲ್ಲಿಯವರೆಗೆ ಯಾವ ನ್ಯಾಯಾಲಯದಲ್ಲೂ ಆಣೆ ವಹಿಸಲಿಲ್ಲ ಮತ್ತು ಎಲ್ಲಾ ಅಧಿಕಾರಿಗಳು ಅವರ ಆಣೆ ವಹಿಸದೇ ವಿವರ ನೀಡಲು ಅನುಮತಿ ನೀಡಿದರು ಎಂದು, ಈ ಮಾತು ಸಹ ನಂಬಲು ಸಾಧ್ಯವಿಲ್ಲ. ಈಗಲೂ ಸಹ ಆಥಮ ಸಾಹಿಬರಿಗೆ ಯಾವುದಕ್ಕು ಸಾಕ್ಷ್ಯ ನೀಡಲು ಕರೆದರೆ, ಅವರು ಈ ನೆಪ ನೀಡುವರು. ನಾನು ಎಲ್ಲಾ ಸಂಸತ್ ಸದಸ್ಯರಿಗಿಂತ ಮತ್ತು ಎಲ್ಲಾ ಹಂತದ ಕ್ರೈಸ್ತ ಉನ್ನತ ಹುದ್ದೆದಾರರಿಂದ, ಗೌರ್ನರ್ ಜನರಲ್‌ಗಿಂತಲೂ ನಾನು ಹೆಚ್ಚು ಪ್ರಾಮಾಣಿಕ. ಆದ ಕಾರಣ ಆಣೆ ವಹಿಸುವುದಿಲ್ಲ. ಬೈಬಲ್‌ನಲ್ಲಿ ದೇವವಾಣಿ, ದೇವದೂತರ ಆಣೆ, ಪ್ರವಾದಿಗಳ ಆಣೆ ಕಾಣಬಹುದಾಗಿದೆ. ಇಂಜೀಲ್‌ನಲ್ಲಿ ಮಸೀಹನ ಆಣೆ, ಪತ್ರಸನ ಆಣೆ ಇವೆ ಆ ನೆಲೆಯಲ್ಲಿಯೇ ಕ್ರೈಸ್ತಮತ ಪಂಡಿತರ ಆಣೆವಹಿಸಲು ಪತ್ವಾ ಹೊರಡಿಸಿದ್ದಾರೆ. ಮಸೀಹನು ದೇವನನ್ನು ಸಾಕ್ಷವಹಿಸಿ ಸತ್ಯವಾಗಿ ಪ್ರಮಾಣ ಮಾಡಲು ಎಲ್ಲಿಯೂ ನಿಷೇಧ ಹೇರಲಿಲ್ಲ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–9, ಪುಟ–104)

**ಯಾವುದೇ ಗೌರವಾನ್ವಿತ ಕ್ರೈಸ್ತನು ಆಣೆ ವಹಿಸಲು ನಿರಾಕರಿಸಿದ ಪುರಾವೆ ಸರಕಾರ ನೀಡಬಹುದೇ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಆಥಮ ಸಾಹೇಬರು ಯಾರಾದರು ಗೌರವಾನ್ವಿತ ಕ್ರೈಸ್ತ ಸಾಕ್ಷಿ ನೀಡುವ ಸಮಯ ಆಣೆ ವಹಿಸಲು ನಿರಾಕರಿಸಿದ ಪುರಾವೆ ಒದಗಿಸಬಹುದೇ? ಈಗ ಉಚಿತವೆನಿಸುವುದೇನೆಂದರೆ ಆಥಮ ಸಾಹಿಬರು ಯಾವುದಕ್ಕೂ ನೆಪವನ್ನೇ ಆಧರಿಸುವವರಾದರೆ, ಯಾವುದಕ್ಕೂ ಆಣೆ ಮಾಡಬಯಸುವುದಿಲ್ಲ ಎಂದಾದರೆ, ಆಣೆ ಮಾಡುವುದು ನಿಷೇಧವಿದೆ ಎಂಬ ಈ ನೆಪ ಬಿಡಬೇಕು. ಏಕೆಂದರೆ ಪೂರ್ಣರೂಪದಲ್ಲಿ ನಾವದನ್ನು ಇತ್ಯರ್ಥಪಡಿಸಿದ್ದೇವೆ. ಇದೀಗ ತಮ್ಮ ಎಲ್ಲಾ ಕುತಂತ್ರಗಳೊಡನೆ ಸೇರಿ ಸಲಹೆ ಪಡೆದು ತಮ್ಮ ಪ್ರಾಣ ಉಳಿಸಿಕೊಳ್ಳಲಿಕ್ಕಾಗಿ ಹೊಸ ನೆಪ ಒಂದು ಪ್ರಸ್ತುತಪಡಿಸಲಿ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ-9, ಪುಟ-112)

**ಈ ಘಟನೆಯ ಕುರಿತು ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿ**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಕ್ರೈಸ್ತ ಜನರ ರಾಕ್ಷಸಿ ಯೋಜನೆಗಳನ್ನುಯು ಮತ್ತು ಆಸುರವಾಣಿಯಿಂದ ತಮ್ಮ ವಿಜಯದ ದಾವೆಯನ್ನು ಮಾಡಬಯಸುತ್ತಾರೆ. ಆದರೆ ಅಲ್ಲಾಹನು ಅವರ ಕುತಂತ್ರಗಳನ್ನು ಅವಶ್ಯವಾಗಿ ಛಿದ್ರಗೊಳಿಸುವನು. ಇವರುಗಳು ಇಂತಹ ದಾವೆ ಮಾಡುವವರು ಎಂಬ ವಿಷಯ ಇಂದಿನಿಂದ ಹದಿಮೂರು ನೂರು ವರ್ಷಗಳ ಹಿಂದೆ ನಬಿ ಕರೀಂ(ಸ) ಸೂಚನೆ ನೀಡಿದ್ದರು. ಅದರ ತಾತ್ಪರ್ಯ ಮತ್ತು ಇಂಗಿತವು ಈ ಮಹದಿ ಮೌಊದ್‌ರ ಕಾಲಘಟ್ಟದಲ್ಲಿ. ಅದು ಅಂತಿಮ ಕಾಲವಾಗಿರುವುದು. ಮಹದಿಯ ಪಂಗಡ ಮತ್ತು ಕ್ರೈಸ್ತರ ಪಂಗಡದ ನಡುವೆ ಒಂದು ಚರ್ಚಾಕೂಟ ನಡೆಯುವುದು. ದೈವವಾಣಿ ಅಂದರೆ ದೈವಿಕ ದೃಷ್ಟಾಂತಗಳ ಮತ್ತು ಕುರುಹುಗಳ ಹಾಗೂ ತತ್ವಾಧಾರವಾಗಿ ಸಾಬೀತಾಗುವುದು. 'ಅಲ್-ಹಖ್ಖು ಮ ಆಲಿ ಮುಹಮ್ಮದ್" ಅಂದರೆ ಮುಹಮ್ಮದ್(ಸ) ರವರ ವಂಶದವರ ಹಾಗೆ ಮತ್ತು ಅದರ ವಾರಸುದಾರರಾಗಿರುವವರು ಸತ್ಯವಂತರಾಗಿರುವರು. ಶೈತಾನನ ವಾಣಿ ಎಲ್ಲಡೆಯಿಂದ ಬರುವುದು. 'ಅಲ್-ಹಖ್ಖು ಮ ಆಲಿ ಈಸಾ" ಅಂದರೆ ಈಸಾರ ಜನರು ಸತ್ಯವಂತರಾಗಿರುವರು. ಆದರೆ ಅಂತಿಮವಾಗಿ ಅಲ್ಲಾಹನು ಸ್ಪಷ್ಟವಾಗಿ ಜಾಹೀರುಪಡಿಸುವನು. ಮುಹಮ್ಮದೀಯು ಜನರೇ ಸತ್ಯವಾಗಿರುವರು ಮತ್ತು ಇಸ್ಲಾಮ್ ಧರ್ಮವೇ ವಿಜಯ ಪಡೆಯುವುದು. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ-9, ಪುಟ-12)

ಹದೀಸಿನ ಪದಗಳು ಹೀಗಿವೆ: **ಯುನಾದಿ ಮುನಾದಿಮ್ಮಿನಸ್ಸಮಾಇ ಅನ್ನಲ್ ಹಖ್ಖ ಫೀ ಆಲಿ ಮುಹಮ್ಮದಿನ್ ವಯುವಾದಿ ಮಿನಲ್ ಅರ್‌ಝಿ ಅನ್ನಲ್‌ಹಖ್ಖ ಫೀ ಆಲಿ ಈಸಾ ಇನ್ನಮಲ್ ಅಸ್‌ಫಲ ಕಲಿಮತುಶ್ಶೈತಾನಿ ವಸ್ಸೌತು ಲ್ ಅಲಾ ಕಲಿಮತಿಲ್ ಉಲಿಯಾ.**

(ಹುಲಿಯ ಅಬಿನಈಮ್, ಇಖ್ತರಬುಸ್ಸಾಅ, ಪುಟ-108)

ಅಂದರೆ ಆಕಾಶದಿಂದ ಧ್ವನಿಸುವುದು ಮುಹಮ್ಮದ್(ಸ) ರವರ ಅನುಯಾಯಿಗಳ ಪರವಾಗಿದೆ. ಆದರೆ ನೆಲದಿಂದ ಧ್ವನಿ ಬರುವುದು ಸತ್ಯವು ಈಸಾರವರ ಅನುಯಾಯಿಗಳ ಪರವಾಗಿದೆ ಎಂದು. ಆದರೆ ನೆನಪಿಡಿರಿ. ನೆಲದಿಂದ ಬರುವ ಧ್ವನಿಯು ಶೈತಾನನ ಧ್ವನಿ ಆಗಿರುವುದು ಮತ್ತು ಮೇಲಿನಿಂದ ಬರುವ ಧ್ವನಿ ಅದು ಅಲ್ಲಾಹನ ಧ್ವನಿಯಾಗಿರುವುದು. ಅದು ಎಂದೆಂದಿಗೂ ಉನ್ನತವುಯುವಾಗಿರುವುದು. (ತಾರೀಖೆ ಅಹ್ಮದಿಯತ್, ಸಂಪುಟ-1, ಪುಟ-509).

**ಭವಿಷ್ಯವಾಣಿಯಲ್ಲಿ ತಿದ್ದುಪಡಿ ಆಥಮನ ರುಜುಪಡಿಸುವಿಕೆಗೆ ಸಾಕ್ಷ್ಯವಾಗಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಅಮೃತ್ಸರದ ಕ್ರೈಸ್ತರಿಂದ ಮತ್ತು ಡಾ/ ಮಾರ್ಟಿನ್ ಕ್ಲಾರ್ಕ್ ಅವರಿಂದ ಒಂದು ಪತ್ರಿಕೆ ತಲುಪಿದೆ. ಅದು ಮುಹಮ್ಮದ್ ಸಯೀದ್ ಧರ್ಮವಾಹಕ ಆದವನ ವತಿಯಿಂದ ಪ್ರಕಟಿಸಲಾಗಿದೆ. ಆ ಪತ್ರಿಕೆಯ ತಕ್ಕುದಾದ ಉತ್ತರ ನಮ್ಮ ಈ ಪತ್ರಿಕೆಯಲ್ಲಿ ಬಂದಿರುತ್ತದೆ ಆದರೆ ಈ ಸಮಯ ಪ್ರೇಕ್ಷಕರಿಗೆ ಪಾದರಿ ಸಾಹಿಬರುಗಳ ಒಂದು ದೊಡ್ಡ ಅಸಹ್ಯ ಮತ್ತು ವಂಚನೆಯಿಂದ ತಿಳಿಯ ಪಡಿಸಬಯಸುತ್ತೇನೆ. ಅದೇನೆಂದರೆ ಹಾವಿಯ (ನರಕಾಗ್ನಿ) ಮತ್ತು ಸಾವಿನಿಂದ ರಕ್ಷಣೆ ಪಡೆಯಲು. ನಾವು ನಮ್ಮ ದೈವವಾಣಿಯ ಬರಹದಲ್ಲಿ ಯಾವ ಶರತ್ತನ್ನು ಬರೆದಿದ್ದೆವು. "ಶರತ್ತೇನೆಂದರೆ ಸತ್ಯದೆಡೆ ರುಜುಪಡಿಸಿಕೊಳ್ಳಬಾರದು" ಅದನ್ನು ಬೇಕಂತಲೇ ಅವರು ವಂಚನೆ ಮತ್ತು ಮೋಸಗಾರಿಕೆಯ ನೆಲೆಯಲ್ಲಿ ಅದನ್ನು ದಿವ್ಯವಾಣಿಯ ಬರಹದಿಂದ ಬಿಟ್ಟುಬಿಡುತ್ತಾರೆ ಏಕೆಂದರೆ ಅದರಿಂದಲೇ ಅವರಿಗೆ ಹೆದರಿಕೆ ಉಂಟಾಗಿತ್ತು. ಆ ಶರತ್ತು ಅವರ ಎಲ್ಲಾ ತಂತ್ರಗಳನ್ನು ನಿಶಸ್ತ್ರಗೊಳಿಸುವಂತಿತ್ತು. ಅವರು ಚೆನ್ನಾಗಿ ಬಲ್ಲವರಾಗಿದ್ದರು. ಮಿ। ಅಬ್ದುಲ್ಲ ಆಥಮ್ ತಮ್ಮ ಕೃತಿಕಾರ್ಯಗಳನ್ನಯ ಆ ಶರತ್ತಿಗೆ ಶರಣಾಗಿದ್ದರು. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ-9, ಪುಟ-18).

**ಅಬ್ದುಲ್ಲ ಆಥಮರಿಗೆ ಈ ಎರಡನೆಯ ಯುದ್ಧ ಸ್ವೀಕರಿಸಲು ಏನು ಅಡ್ಡಿಯಾಗಿತ್ತು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ನಾವು ಪದೇ ಪದೇ ಹೇಳಿಕೊಂಡು ಬಂದಿದ್ದೇನೆ ಮತ್ತು ಅಲ್ಲಾಹನ ಸಾಕ್ಷಿ ನಾವು ಸತ್ಯವಾಗಿ ಹೇಳುತ್ತೇನೆ. ಶ್ರೀ ಅಬ್ದುಲ್ಲ ಆಥಮ್ ಇಸ್ಲಾಮಿನ ಗೌರವಕ್ಕೆ ತಲೆಬಾಗಿಸಿ ಸತ್ಯವನ್ನು ರುಜುಪಡಿಸಿಕೊಂಡ ಕಾರಣವೇ ಅವರು ಉಳಿದುಕೊಂಡಿದ್ದಾರೆ. ಇದೀಗ ಇಡೀ ಲೋಕ ನೋಡುತ್ತಿದೆ. ಒಂದು ವೇಳೆ ಅಬ್ದುಲ್ಲ ಆಥಮರ ದೃಷ್ಟಿಯಲ್ಲಿ ನಮ್ಮ ಈ ಹೇಳಿಕೆ ಸರಿಯಲ್ಲ ಎಂದಾದರೆ ಈ ಎರಡನೆಯ ಯುದ್ಧವನ್ನು ಸ್ವೀಕರಿಸಬಹುದು. ಏಕೆಂದರೆ ಸತ್ಯಕ್ಕೆ ಭಂಗವಿಲ್ಲ. ಅವರಿಗೆ ಎದುರಿಗೆ ಬರಲು ಭಯವಾದರೇನು. ಪಾದರಿ ಸಾಹಿಬರುಗಳು ಆ ದಿವ್ಯವಾಣಿಯ ಬರಹದಿಂದ ಒಂದು ವಾಕ್ಯವನ್ನು ತನ್ನ ಪತ್ರಿಕೆಯಿಂದ ತೆಗೆದು ಹಾಕಿರುತ್ತಾರೆ. ಅದರ ವಿಷಾದಕ್ಕೆ ಕಾರಣ ಅವರ ಪೂರ್ವಜರಿಂದ ಹಾಗೆಯೇ ನಡೆದುಬಂದುದಾಗಿದೆ. ಅವರು ಸಹಜವಾಗಿ ರದ್ದುಮಾಡಲು ವಿವಶರಾಗಿದ್ದರು. ಅದೇ ರೀತಿ ಇವರು ಸಹ ರದ್ದು ಮಾಡುವುದು ಅವಶ್ಯವಾಗಿತ್ತು, ಅವರ ಮಾರ್ಗ ಅನುಸರಿಸಬೇಕು. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ-9, ಪುಟ-19).

**ನಾನು ಸುಳ್ಳುಗಾರನಾಗಿದ್ದರೆ ಆಥಮನು ಆಣೆ ಮಾಡಲು ಫಾಲ್ಕನ್ ಹಕ್ಕಿಯು ಗುಬ್ಬಚ್ಚಿಯನ್ನು ಭೇಟಿ ಮಾಡಲು ಬರುವ ರೀತಿಯಲ್ಲಿ ಧಾವಿಸಿಕೊಂಡು ಮೈದಾನಕ್ಕೆ ಬರುತ್ತಿದ್ದರು.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಆಥಮರು ಈ 15 ತಿಂಗಳುಗಳ ಒಳಗೆ ತಮ್ಮ ಅನುಭವದೊಂದಿಗೆ ನನ್ನನ್ನು ಸುಳ್ಳುಗಾರನೆನಿಸಿಕೊಂಡಿದ್ದರೆ ಅವರಿಗಿಂತ ಹೆಚ್ಚು, ಯಾರೂ ಸಹ ನನ್ನ ಮೇಲೆ ದಂಡೆತ್ತಿ ಬರುತ್ತಿರಲಿಲ್ಲ. ಮತ್ತು ಆಣೆ ಮಾಡಲು ಸಿದ್ಧರಾಗಿ ಗುಬಚ್ಚಿಯನ್ನು ಭೇಟಿ ಮಾಡಲು ಫಾಲ್ಕನ್ ಹಕ್ಕಿ ಬರುವ ರೀತಿಯಲ್ಲಿ ಧಾವಿಸಿಕೊಂಡು ಮೈದಾನಕ್ಕೆ ಬರುತ್ತಿದ್ದರು. ಆಣೆ ಮಾಡುವ ಅಪೇಕ್ಷೆಗೆ ಅವರು ಸಂತೋಷ ಪಡಬೇಕಾಗಿತ್ತು. ಏಕೆಂದರೆ ಈಗ ಶತ್ರು ಒಂದು ತನ್ನ ಹಿಡಿತಕ್ಕೆ ಬಂದಿರುತ್ತಾನೆ. ಆದರೆ ಈಗ ಆಪತ್ತು ಅವರ ಮೇಲೆ ಬಂದಿದೆ. ಅದಕ್ಕೆ ಕಾರಣವೇನೆಂದರೆ ಅವರಿಗೆ ನನ್ನ ವಿದ್ಯವಾಣಿಯ ರಹಸ್ಯ ತಿಳಿದಿದೆ. ಇತರ ಮೂಢ ಕ್ರೈಸ್ತರು ಮತ್ತು ಮುಸಲ್ಮಾನರು ತಿಳಿಯದವರಾಗಿದ್ದಾರೆ. ಆದರೆ ಅವರು ಚೆನ್ನಾಗಿ ಬಲ್ಲವರಾಗಿದ್ದಾರೆ. (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ-9, ಪುಟ-76)

ಆಥಮರ ಭವಿಷ್ಯವಾಣಿ ಕುರಿತು ಇನ್ನು ಹೆಚ್ಚಿನ ಮಾಹಿತಿ ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ವಿವರಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ದಾರುಸ್ಸನಾಅತ್ ಖಾದಿಯಾನ್**

**Ahmadiyya Vocational (Technical) Training center, Qadian. ನಲ್ಲಿ ದಾಖಲಾತಿ ಪ್ರಾರಂಭಗೊಂಡಿದೆ. ಕರಕೌಶಲ್ಯತೆ ಪಡೆಯ ಬಯಸುವ ಯುವಕರು ತ್ವರೆ ಮಾಡಿರಿ.**

ಎಲ್ಲಾ ಅಹ್ಮದಿ ಯುವಕರ ಅವಗಾಹನೆಗಾಗಿ ಸೂಚಿಸಲಾಗುತ್ತದೆ. "ದಾರುಸ್ಸನಾಅತ್ ಖಾದಿಯಾನ್" ಸಂಸ್ಥೆಯಲ್ಲಿ ದಾಖಲಾತಿ ಪ್ರಾರಂಭಗೊಂಡಿವೆ. ಈ ಸಂಸ್ಥೆಯಲ್ಲಿ, ಇಲೆಕ್ಟ್ರೀಶಿಯನ್/ಪ್ಲಮ್‌ಬಿಂಗ್/ವೆಲ್ಡಿಂಗ್/ಡಿಸೆಲ್ ಮೆಕಾನಿಕ್/ motor vehicle mechanic/AC and Refrigerator ಮತ್ತು ಕಂಪ್ಯೂಟರಿನ ಒಂದು ವರ್ಷದ ಕೋರ್ಸ್ ಮಾಡಿಸಲಾಗುತ್ತದೆ. ಸರಕಾರಿ ಸಂಸ್ಥೆಯಿಂದ NSIC ಯ ಸನದುಗಳನ್ನು (Certified) ನೀಡಲಾಗುತ್ತದೆ. ಕೌಶಲ್ಯತೆ ಕಲಿಯ ಬಯಸುವ ಯುವಕರಿಗೆ ಅತ್ಯುತ್ತಮ ಅವಕಾಶವಾಗಿರುತ್ತದೆ. ಯಾವ ಯುವಕರು ತಮ್ಮ ಶಾಲೆಯ ಶಿಕ್ಷಣ ಪೂರ್ಣ ಮಾಡಲಾಗಲಿಲ್ಲವೋ ಅವರು ಈ ಕೋರ್ಸ್‌ಗಳಲ್ಲಿ ದಾಖಲಾತಿ ಪಡೆದು ಲಾಭಾನ್ವಿತರಾಗಬಹುದು. ಖಾದಿಯಾನಿನಿಂದ ಹೊರಗಿನ ಅಹ್ಮದಿ ಯುವಕರಿಗೆ ಜಮಾಅತಿನ ಆಶ್ರಯದಲ್ಲಿ ನಡೆಯುವ ಹಾಸ್ಟೆಲ್‌ನಲ್ಲಿ ಊಟದ ವ್ಯವಸ್ಥೆ ಇರುತ್ತದೆ. ಹಾಸ್ಟೆಲ್ ಮತ್ತು ಊಟದ ಖರ್ಚು ಉಚಿತವಾಗಿರುತ್ತದೆ. ಯಾವ ಶುಲ್ಕವು ಪಡೆಯಲಾಗುವುದಿಲ್ಲ. ದಾಖಲಾತಿ ಪಡೆಯ ಬಯಸುವ ಯುವಕರು ಅತಿ ಶೀಘ್ರವಾಗಿ ಈ ಕೆಳಗಿನ ನಂಬರುಗಳಿಗೆ ಸಂಪರ್ಕಿಸಿರಿ.

**ಫೋನ್ ನಂ:** 9872923363, 9872725895, 8077546198

**email :** darulsanaat.qadian@gmail.com

(ಪ್ರಾಂಶುಪಾಲರು ದಾರುಸ್ಸನಾಅತ್ ಖಾದಿಯಾನ್)

*(ಪುಟ ಸಂಖ್ಯೆ* **01ರ** *ಉಳಿದ ಭಾಗ)*

ವಿಧಾನ ಎಲ್ಲಾ ಪ್ರಗತಿಗಳಿಗೆ ನಾಂದಿಯಾಗಿರುತ್ತದೆ. ಜ್ಞಾನದ ಸದ್ಬಳಕೆ ಮಾಡಿದರೆ ಜ್ಞಾನ ಹೆಚ್ಚುವುದು. ಕಣ್ಣು, ಕೈ, ಮೂಗು, ಕಿವಿ, ಒಟ್ಟಿನಲ್ಲಿ ಎಲ್ಲಾ ಅಂಗಗಳು ಅದರ ಸದ್ಬಳಕೆ ಮಾಡಿದರೆ ಅವಶ್ಯವಾಗಿ ಪ್ರಗತಿ ಶೀಲರಾಗಿರುತ್ತೇವೆ. ಇದೊಂದು ಸಾರ್ವಜನಿಕ ಕಾನೂನಾಗಿದೆ. ಅದರಲ್ಲಿ ಹಿಂದೂ, ಮುಸ್ಲಿಮ್ ಅಥವಾ ಕ್ರೈಸ್ತರು ಎಂಬ ಯಾವ ಭೇಧಭಾವ ಇಲ್ಲ. ಮುಸಲ್ಮಾನರು ತನ್ನ ಸಂಪತ್ತಿನ ಸದ್ಬಳಕೆ ಮಾಡದೆ ಅವನತಿ ಕಾಣುತ್ತಿದ್ದಾರೆ. ಆದರೆ ಹಿಂದುಗಳು ಅದರ ಸದ್ಬಳಕೆ ಮಾಡುತ್ತಿದ್ದಾರೆ. ಕಾರಣ ಪ್ರಗತಿ ಹೊಂದುತ್ತಿದ್ದಾರೆ.

ಆಧ್ಯಾತ್ಮಿಕತೆಯು ಹೀಗೆಯೇ ಇದೆ ಪವಿತ್ರ ಖುರ್‌ಆನನ್ನೇ ನೋಡಿ, ಮುಸಲ್ಮಾನರು ಅದರ ಸದ್ಬಳಕೆ ಮಾಡುತ್ತಿದ್ದರು. ಕಾರಣ ತತ್ವವಾದಿಗಳಾಗಲಿ, ಬುದ್ಧಿಶಾಲಿಗಳಾಗಲಿ, ಕ್ರೈಸ್ತರಾಗಲಿ, ಯಹೂದ್ಯರಾಗಲಿ, ಇಸ್ಲಾಮಿ ಧರ್ಮವನ್ನು ಎದುರಿಸಲು ಸಾಧ್ಯವಾಗಲಿಲ್ಲ ಆದರೆ ಇಂದು ವೇದ, ತೌರಾತ್ ಮತ್ತು ಇಂಜೀಲ್ ಪ್ರತಿಯೊಬ್ಬರು ತಮ್ಮನ್ನು ಮುಂದಾಗಿ ಪ್ರಸ್ತುತಪಡಿಸುತ್ತಿದ್ದಾರೆ. ಇನ್ನೊಂದೆಡೆ ಬೌದ್ಧಿಕ ಜ್ಞಾನ ಆಕ್ರಮಣ ಸಾಧಿಸುತ್ತಿವೆ. ಕಾಲವೊಂದಿತ್ತು ಇಸ್ಲಾಮ್ ಧರ್ಮ ಕುಫ್ರ್ (ಅವಿಶ್ವಾಸ) ಅನ್ನು ನುಂಗುತ್ತಿತ್ತು. ಇಂದು ಕುಫ್ರ್ (ಅವಿಶ್ವಾಸಿ) ಇಸ್ಲಾಮ್ ಧರ್ಮವನ್ನು ನುಂಗುತ್ತಿದೆ. ಸ್ವಯಂ ಮುಸಲ್ಮಾನರು ಇಸ್ಲಾಮ್ ಧರ್ಮದ ಬಗ್ಗೆ ಹೇಳುತ್ತಿದ್ದಾರೆ. ಅದರ ಈ ಆಜ್ಞೆ ಪಾಲಿಸಲರ್ಹವಲ್ಲ. ಆ ಆಜ್ಞೆ ಪಾಲಿಸಲರ್ಹವಲ್ಲ ಎಂದು ಹಾಗಾದರೆ ಏನು ಉಳಿಯಿತು? ಅಲ್ಲಾಹನು ಮುಸಲ್ಮಾನರಿಗೆ ಸದ್ಬುದ್ಧಿ ನೀಡುವಂತಾಗಲಿ, ತನ್ನ ದೋಷಗಳನ್ನು ಇಸ್ಲಾಮ್ ಧರ್ಮಕ್ಕೆ ಅಂಟಿಸದಿರಲಿ, ಸ್ವಯಂ ಸನ್ನಡತೆ ಹೊಂದಿರುವುದಿಲ್ಲ. ಆದರೆ ಪರಿಣಾಮದ ನ್ಯೂನತೆಗಳನ್ನು ಪವಿತ್ರ ಖುರ್‌ಆನ್‌ಗೆ ಜೋಡಿಸುತ್ತಾರೆ. **(ತಫ್ಸೀರ್ ಕಬೀರ್, ಸಂಪುಟ-3, ಪುಟ-447, ಮುದ್ರಣ 2010 ಖಾದಿಯಾನ್)**

*(ಪುಟ ಸಂಖ್ಯೆ* **12ರ** *ಉಳಿದ ಭಾಗ)*

ಎಲ್ಲ ಕಾಲಕ್ಕೂ ಸುರಕ್ಷಿತವಾಗಿಡುವನು. ಇಂದಿನವರೆಗೆ ಆ ಮಾತು ಸತ್ಯವಾಗಿದೆ. ಹೀಗಿರುವಾಗ ನಮಗೆ ಬೇರೆಯವರ ಸಹಾಯ ಪಡೆಯುವ ಅಥವಾ ಇನ್ನಿತರಡೆ ನೋಡುವ ಅವಶ್ಯಕತೆ ಇಲ್ಲ. ನಾವು ಜನರಿಗೆ ಹೇಳುತ್ತೇವೆ. ನಿಮಗೆ ಏನಾದರೂ ಸಮಸ್ಯೆ ಉಂಟಾದರೆ ಅಥವಾ ನಿಮಗೆ ಪವಿತ್ರ ಖುರ್‌ಆನ್‌ನ ವಚನಗಳು ಅರ್ಥವಾಗಲಿಲ್ಲವಾದರೆ ಅದು ನಾಮಧಾರಿ ಮುಸ್ಲಿಮ್ ಉಲಮಾ ಅವರು ಇಸ್ಲಮಿ ಶಿಕ್ಷಣವನ್ನು ಹಾಳುಗೆಡವಿದರ ಫಲದಿಂದಾಗಿದೆ. ಅವರು ತಪ್ಪು ದಾರಿಯಲ್ಲಿ ನಡೆಸುತ್ತಿದ್ದಾರೆ. ಅವರು ನಮ್ಮ ಬಳಿ ಬಂದರೆ ನಾವು ಅವರಿಗೆ ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಡುವೆನು.

ಹುಝೂರೆ ಅನ್ವರ್(ಅಬಿಅ) ನುಡಿದರು. ನೀವು ಇಸ್ಲಾಮಿ ಶಿಕ್ಷಣವನ್ನು ಇಂದಿನ ಯುಗಕ್ಕೆ ಹೊಂದುವಂತೆ ಇಲ್ಲ ಎಂದು ಏನಾದರೂ ಭಾವಿಸಿಕೊಂಡಿದ್ದರೆ ನನಗೆ ತಿಳಿಸಿರಿ. ನಿಮ್ಮ ವೈಯಕ್ತಿಕ ಅಬಿಲಾಷೆ ಇದ್ದರೆ ಅದು ಬೇರೆ ವಿಷಯ. ತೀರ ಅಗತ್ಯವಿರುವ ಯಾವುದಾದರೂ ಮೂಲಭೂತ ಸಮಸ್ಯೆ, ಅದು ಖುರ್‌ಆನ್‌ನಲ್ಲಿ ಇಲ್ಲ ಎಂದು ನೀವು ಭಾವಿಸುವುದಾದರೆ ತಿಳಿಸರಿ.

* ಮಹಿಳೆಯು ಹೇಳಿದರು. ಇಂತಹುದು ಯಾವುದೂ ಇಲ್ಲ. ನಾನು ಯೋಚಿಸುವುದೇನೆಂದರೆ ಜನರು ತಾವು ನಡೆಯುವ ಧರ್ಮವನ್ನು ಏಕೆ ಬದಲಿಸುವುದಿಲ್ಲ. ಅಭಿಪ್ರಾಯದಲ್ಲಿ ಜನರು ಯಾವುದೇ ಧರ್ಮದಲ್ಲಿ ನಡೆಯುವವರಾಗಲಿ. ಅವರಿಗೆ ಬದಲಿಸುವ ಹಕ್ಕಿರಬೇಕು. ಆಗ ಹುಝೂರ್ ಹೇಳಿದರು. ಆದರೆ ಪ್ರಶ್ನೆಯಿರುವುದು ಯಾವುದೇ ತರಹದ ಬದಲಾವಣೆಯ ಅಗತ್ಯವೇನಿದೆ? ಯಾವುದೇ ಅರ್ಥ ವ್ಯವಸ್ಥೆಯ ಸಮಸ್ಯೆ ಇದ್ದರೆ ಆ ಬಗ್ಗೆ ಖುರ್‌ಆನ್ ಬೆಳಕು ಚೆಲ್ಲಲಿಲ್ಲ. ಹಾಗೂ ಯಾವುದೇ ವೈಜ್ಞಾನಿಕ ದೃಷ್ಟಿಕೋನದ ಬಗ್ಗೆ ಪವಿತ್ರ ಖುರ್‌ಆನ್ ವಿವರಿಸಲಿಲ್ಲ ಎಂದಾದರೆ ಸರಿ. ಅದೇ ರೀತಿ ನಿಮಗೆ ಕೆಲವು ಸಾಮಾಜಿಕ ಸಮಸ್ಯೆಗಳಿವೆ, ಗೃಹ ಸಮಸ್ಯೆಗಳಿವೆ. ಅದರ ವಿವರ ಪವಿತ್ರ ಖುರ್‌ಆನ್‌ನಲ್ಲಿ ಇಲ್ಲ ಎಂದಾರೆ ಸರಿ. ಆದರೆ ಇವೆಲ್ಲ ಸಮಸ್ಯೆಗಳ ವಿವರ ಪವಿತ್ರ ಖುರ್‌ಆನ್‌ನಲ್ಲಿ ಅಡಕವಾಗಿವೆ. ಪವಿತ್ರ ಖುರ್‌ಆನ್ ಅದರ ಪರಿಹಾರವನ್ನು ಸೂಚಿಸಿದೆ. ಹೀಗಿರುವಾಗ ಬದಲಿಸುವ ಅಗತ್ಯವಾದರೂ ಏಕಿದೆ?

ಹುಝೂರೆ ಅನ್ವರ್(ಅಬಿಅ) ನುಡಿದರು. ಕೆಲ ಅವಧಿ ನಂತರ ಬದಲಾಣೆ ತರುವ ಅಗತ್ಯವಿದೆ ಎನ್ನಲು. ಇದೇನು ಮಾನವ ಸೃಷ್ಟಿಸಿದ ಕಾನೂನಲ್ಲ, ಯಾವುದೆ ದೇಶದ ಸಂಸತ್ತು ನಿರೂಪಿಸಿದ ಕಾನೂನಲ್ಲ. ಆದುದರಿಂದ ನಮ್ಮ ವಿಶ್ವಾಸವೇನೆಂದರೆ ಈ ಗ್ರಂಥವು ಅಲ್ಲಾಹನು ಅವತರಿಸಿದ್ದಾನೆ. ಆದ ಕಾರಣ ಯಾವ ಬದಲಾವಣೆಯ ಅವಶ್ಯಕತೆ ಇಲ್ಲ. ಈ ಗ್ರಂಥದ ಬರಹ ಕೂಡ ಬದಲಿಸುವ ಅವಶ್ಯಕತೆ ಇರುವುದಿಲ್ಲ. ಕೇವಲ ಮಾತು ಪವಿತ್ರ ಖುರ್‌ಆನ್‌ನ್ನು ಗ್ರಹಿಸುವುದಾಗಿದೆ. ನೀವು ಪವಿತ್ರ ಖುರ್‌ಆನ್‌ನ್ನು ಸರಿಯಾಗಿ ತಿಳಿದವರಾದರೆ ನೀವು ಅದೇ ವಚನಗಳಿಂದ ಹಲವು ಅರ್ಥಗಳನ್ನು ಮತ್ತು ಚಿಂತನೆಗಳನ್ನು ಪಡೆದುಕೊಳ್ಳಬಹುದು. ಅದು ನಿಮ್ಮ ತಿಳುವಳಿಕೆಯ ಮೇಲೆ ನಿರ್ಭರವಾಗಿದೆ.

**(ಮುಂದುವರಿಯುವುದು)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ಖಾದಿಯಾನಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಹಿಳಾ ಶಿಕ್ಷಕಿಯರು ಬೇಕಾಗಿದ್ದಾರೆ

ತಾಲಿಮುಲ್ ಇಸ್ಲಾಮ್ ಸೀನಿಯರ್ ಸೆಕೆಂಡರಿ ಸ್ಕೂಲ್ ಹಾಗೂ ನುಸ್ರತ್ Girls ಪ್ರೌಢಶಾಲೆಯಲ್ಲಿ Physical Education, Panjabi, Physics, Mathematics, English, Computer, Hindi, ವಿಷಯಗಳನ್ನು ಬೋಧಿಸಲು ಮಹಿಳಾ ಶಿಕ್ಷಕಿಯರ ಕೆಲ ಹುದ್ದೆಗಳು ತುಂಬಬೇಕಾಗಿದೆ. ಸೇವಾ ಭಾವನೆಯುಳ್ಳ ಮತ್ತು ಶೈಕ್ಷಣಿಕ ಅರ್ಹತೆ ಪಡೆದ ಇಚ್ಛೆಯುಳ್ಳ ಅಭ್ಯರ್ಥಿಗಳು-ನಝಾರತ್ ದೀವಾನ್ ನಿಂದ ಬೇಕಾದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ, ತಮ್ಮ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹುದ್ದೆಗಳ ವಿವರ ಈ ಕೆಳಗಿನಂತಿದೆ.

(1)P.G.T (Post Graduate Teacher) ಶೈಕ್ಷಣಿಕ ಅರ್ಹತೆ: ಸಂಬಂಧಿತ ವಿಷಯಗಳಲ್ಲಿ 55% ಅಂಕಗಳೊಂದಿಗೆ Post graduation ಮುಗಿಸಿರಬೇಕು ಮತ್ತು B.Ed ಜೊತೆಯಲ್ಲಿ ಯಾವುದೇ ಸರಕಾರದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 2 ವರ್ಷಗಳ ಬೋಧನಾ ಅನುಭವ ಪಡೆದಿರಬೇಕು.

(2)T.G.T (Traind Graduate Generalline Teacher) ಶೈಕ್ಷಣಿಕ ಅರ್ಹತೆ 55% ಅಂಕಗಳೊಂದಿಗೆ Graduation ಮತ್ತು B.Ed ಜೊತೆಯಲ್ಲಿ ಸರ್ಕಾರದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ 3 ವರ್ಷದ ಬೋಧನಾ ಅನುಭವ ಪಡೆದಿರಬೇಕು. (Post graduate) ಆದವರಿಗೆ ಆದ್ಯತೆ ಕೊಡಲಾಗುವುದು.)

(3)ಕಂಪ್ಯೂಟರ್ ಟೀಚರ್: ಶೈಕ್ಷಣಿಕ ಅರ್ಹತೆ, ಸಂಬಂಧಿತ ವಿಷಯಗಳಲ್ಲಿ Graduation (B.C.A) 55% ಅಂಕಗಳೊಂದಿಗೆ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ 3 ವರ್ಷದ ಅನುಭವ ಹೊಂದಿರಬೇಕು. Post graduate ಆದವರಿಗೆ ಆಧ್ಯತೆ ನೀಡಲಾಗುವುದು.

* Physical Education Teacher ಶೈಕ್ಷಣಿಕ ಅರ್ಹತೆ: ಸಂಬಂಧಿತ ವಿಷಯಗಳಲ್ಲಿ Graduation ಆಗಿರಬೇಕು. (B.P.Ed 55% ಅಂಕಗಳೊಂದಿಗೆ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಲ್ಲಿ 3 ವರ್ಷದ ಅನುಭವ ಪಡೆದಿರಬೇಕು.

* TET ಅಥವಾ CTET ಶಿಕ್ಷಣ ಪಡೆದ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು. ಅಭ್ಯರ್ಥಿಯ ವಯಸ್ಸು 20 ವರ್ಷಗಳಿಗಿಂತ ಕಡಿಮೆ ಮತ್ತು 40 ವರ್ಷಕ್ಕೆ ಮೀರಿರಬಾರದು. ಅನಿವಾರ್ಯ ಪರಿಸ್ಥಿತಿಯಲ್ಲಿ ವಯಸ್ಸಿನ ಮಿತಿಯ ರಿಯಾಯಿತಿಯ ಬಗ್ಗೆ ಪರಿಶೀಲಿಸಲಾಗುವುದು. * ಕೇವಲ ಕೇಂದ್ರೀಯ ಕಮಿಟಿ ಆಯ್ಕೆದಾರರ ಕಡೆಯಿಂದ ನಿಗದಿಪಡಿಸಿದ ಲಿಖಿತ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಆಯ್ಕೆ ಮಾಡಿಕೊಳ್ಳಲಾಗುವುದು. ನೂರ್ ಆಸ್ಪತ್ರೆಯಿಂದ ವರದಿ ಪಡೆದ ಆರೋಗ್ಯವಂತರನ್ನು ಮಾತ್ರ ಪರಿಗಣಿಸಲಾಗುವುದು. * ಆಯ್ಕೆಯಾದ ಪಕ್ಷದಲ್ಲಿ ಅಭ್ಯರ್ಥಿಯು ಖಾದಿಯಾನಿನಲ್ಲಿ ತಮ್ಮ ವಸತಿಯ ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕಾಗುತ್ತದೆ. * ಸಂದರ್ಶನಕ್ಕಾಗಿ ಖಾದಿಯಾನಿಗೆ ಕರೆದ ಪಕ್ಷದಲ್ಲಿ ಬಂದು ಹೋಗುವ ಖರ್ಚು ಅಭ್ಯರ್ಥಿಯ ಹೊಣೆಯಾಗಿರುತ್ತದೆ. ಸಂದರ್ಶನದ ತಾರೀಖು ನಂತರ ತಿಳಿಸಲಾಗುವುದು. * ಬೇಕಾದ ಅರ್ಜಿ ನಮೂನೆಗಳು, ದಫತರ್ ನಝಾರತ್ ದೀವಾನ್ ಅಥವಾ ಈ ಕೆಳಗೆ ನಮೂದಿಸಿದ ವಿಳಾಸದಿಂದ ಪಡೆಯಬಹುದು. * ಶೈಕ್ಷಣಿಕ ಅರ್ಹತೆ ಮತ್ತು ಅನುಭವ ಸನದುಗಳನ್ನು Self Attested ಮಾಡಿ ಅದರ ನಕಲುಗಳನ್ನು ನಝಾರತ್ ದೀವಾನ್ ನಲ್ಲಿ ಅರ್ಜಿ ಕರೆದ ಎರಡು ತಿಂಗಳುಗಳ ಒಳಗೆ ತಲುಪಬೇಕಾಗಿದೆ. ಭತ್ಯೆ ಇತ್ಯಾದಿ ಮಾಹಿತಿಗೋಸ್ಕರ ಕೆಳಗಿನ Email, ದೂರವಾಣಿ ನಂಬರುಗಳ ಆಧರಿಸಿ ಕಚೇರಿಯ ವೇಳೆಗಳಲ್ಲಿ ಸಂಪರ್ಕ ಮಾಡಬಹುದು.

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್
ಜಿಲ್ಲಾ ಗುರುದಾಸಪುರ ಪಿನ್ ನಂ-143516
ಮೊಬೈಲ್: 09682587713, 09682627592 ಕಛೇರಿ(Office) : 01872-501130
E-mail: diwan@qadian.in

**(ನಾಝೀರ್ ದೀವಾನ್, ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 29 July 2021, Issue No. 30

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 29ರ ವರದಿಯ ಉಳಿದ ಭಾಗ)**

### ಕ್ರೊಷಿಯನ್ ಮತ್ತು ಜರ್ಮನ್ ಮಹಿಳಾ ಪತ್ರಕರ್ತರಿಂದ ಹುಝೂರರ ಸಂದರ್ಶನ

ಕಾರ್ಯಕ್ರಮದನ್ವಯ ಕ್ರೋಷಿಯದಿಂದ ಬಂದ ಇಬ್ಬರು ಮಹಿಳಾ ಪತ್ರಕರ್ತರು ಮತ್ತು ಓರ್ವ ಜರ್ಮನ್ ಮಹಿಳಾ ಪತ್ರಕರ್ತೆ ಹುಝೂರರ ಸಂದರ್ಶನ ನಡೆಸಿದರು.

ಕ್ರೋಷಿಯಾದಿಂದ ಬಂದ ಮಹಿಳಾ ಪತ್ರಕರ್ತರು ಜಲ್ಸದ ವಿವಿಧ ಕಾರ್ಯಕ್ರಮಗಳ ಮತ್ತು ಸ್ಥಳಗಳ Documentry film ತಯಾರಿಸಿದ್ದರು. ಅವರು ಹಿಂತಿರುಗಿಸಿದ ನಂತರ ಕ್ರೊವೇಷಿಯ ಟಿ.ವಿಯವರು ಅದನ್ನು ಬಿತ್ತರಿಸಿದರು.

ಜರ್ಮನ್ ಮಹಿಳಾ ಪತ್ರಕರ್ತೆಯು ಜರ್ಮನಿಯ ಬಹುದೊಡ್ಡ ಆಲ್‌ಲೈನ್ ಪತ್ರಿಕೆಯವರಾಗಿದ್ದು, ಈ ಪತ್ರಿಕೆಯ ಪ್ರಸಾರ ಹದಿನೇಳೂವರೆ ಮಿಲಿಯನ್‌ಗಿಂತ ಅಧಿಕವಾಗಿದೆ. ಹುಝೂರರ ಈ ಸಂದರ್ಶನವು ಪ್ರಸಕ್ತ ಆನ್‌ಲೈನ್ ಪತ್ರಿಕೆಯಲ್ಲಿದ್ದದ್ದು ಎರಡು ಹಂತದಲ್ಲಿ ಇದು ಪ್ರಸಾರಗೊಳ್ಳಲಿದೆ. ಹೀಗೆ ಎರಡು ಹಂತದಲ್ಲಿ ಪ್ರಸಾರಗೊಳ್ಳುವ ಪರಿಣಾಮವಾಗಿ ಒಟ್ಟು ಸಂಖ್ಯೆ 34 ಮಿಲಿಯನ್ ಆಗಬಹುದು.

* ಜರ್ಮನ್ ಮಹಿಳೆ ಪ್ರಶ್ನೆ ಮಾಡಿದರು. ನೀವು ಜರ್ಮನ್ ಪತ್ರಿಕೆಗೆ ಸಂದರ್ಶನ ನೀಡುವ ಸಮಯದಲ್ಲಿ ಹೇಳಿದ್ದೀರಿ. ಇಂದಿನ ಅತ್ಯಂತ ಅಪಾಯಕರ ವಿಷಯವೆಂದರೆ ಯುವಕರು ಅಲ್ಲಾಹನಿಂದ (ದೇವನಿಂದ) ದೂರವಾಗಿದ್ದಾರೆ. ನಿಮ್ಮ ಅಭಿಪ್ರಾಯದಲ್ಲಿ ಹೀಗೇಕೆ ಆಗಿದೆ?

ಅದರ ಉತ್ತರವಾಗಿ ಹುಝೂರ್ ಹೇಳಿದರು. ಕೇವಲ ಯುವಕರಷ್ಟೇ ಅಲ್ಲ. ಬದಲು ಜನರ ಒಂದು ಭಾರಿ ಸಂಖ್ಯೆ ಧರ್ಮದಿಂದ ದೂರ ಸರಿಯುತ್ತಿದೆ. ದೇವಾಸ್ತಿತ್ವದ ಮೇಲೆ ನಂಬಿಕೆಯೇ ಇಲ್ಲದಂತಾಗಿದೆ. ಅದನ್ನು ಕೇವಲ ಯುವಕರೊಡನೆ ಜೋಡಿಸಿ ನೋಡುವ ಹಾಗಿಲ್ಲ. ಬದಲು ಇತರರು ಸಹ ಅದರಲಿ ಒಳಗೊಂಡಿದ್ದಾರೆ. ಆದರೆ ನಾನು ಹೇಳಿದ್ದು ಉಗ್ರವಾದಿಗಳು ಖಿನ್ನತೆ ಪಡೆದವರಾಗಿದ್ದಾರೆ. ಯುವ ಪೀಳಿಗೆಯು ಅದರಲ್ಲಿ ಶಾಮೀಲಾಗಿದೆ. ನಾನು ಹೇಳಿದ್ದೆ ಅದಕ್ಕೆ ಹಲವು ಕಾರಣಗಳಿವೆ. ಅಂದ ಹಾಗೆ ಇಂತಹ ಸಮಯದಲ್ಲಿ ಅವರ ಮನಸ್ಸುಗಳಿಗೆ ತೃಪ್ತಿ ನೀಡುವ ಅಗತ್ಯವಿರುತ್ತದೆ. ಆದರೆ ಯಾರು ಸಹ ಅವರಿಗೆ ಮಾರ್ಗದರ್ಶಕರಿಲ್ಲ. ಆದುದರಿಂದ ಅವರು ನೇರ ಮಾರ್ಗ ಬಿಟ್ಟು ದಾರಿ ತಪ್ಪಿದವರಿಗೆ ಗುರಿಯಾಗುತ್ತಾರೆ. ಅವರು ಸಹ ಮಾರ್ಗದರ್ಶಕರಿಲ್ಲದೇ ತಪ್ಪು ದಾರಿ ಹಿಡಿದಿರುತ್ತಾರೆ. ಹೀಗೆ ಅದಕ್ಕೆ ಹಲವು ಕಾರಣಗಳಿವೆ. ಈಗ ನನ್ನ ದೃಷ್ಟಿಯಲ್ಲಿ ಆಗ ಇದ್ದ ನಿರ್ದಿಷ್ಟ ಪ್ರಶ್ನೆ ಏನಿತ್ತು ಎಂಬುದಿಲ್ಲ. ನಿಮ್ಮ ದೃಷ್ಟಿಯಲ್ಲಿದ್ದರೆ ಕೇಳಬಹುದು.

* ಸಂದರ್ಶನ ಪಡೆಯುವ ಮಹಿಳೆ ಪ್ರಶ್ನೆ ಕೇಳಿದರು. ನೀವು ಒಂದು ಸಂದರ್ಭದಲ್ಲಿ ಹೇಳಿದ್ದೀರಿ ಯಾರು ಉಗ್ರವಾದದೆಡೆಗೆ ಹೋಗುತ್ತಿದ್ದಾರೆ. ಅದು ಅವರ ತಪ್ಪಲ್ಲ ಉಗ್ರವಾದದೆಡೆ ಕರೆ ನೀಡುವವರ ತಪ್ಪಾಗಿದೆ.

ಆಗ ಹುಝೂರ್ ಹೇಳಿದರು. ನಾನು ಹೀಗೆ ಎಂದೂ ಹೇಳಿಲ್ಲ. ಬದಲು ನಾನು ಹೇಳಿದ್ದು, ಯಾವ ಜನರು ತಮ್ಮ ದುಷ್ಕರ್ಮಗಳ ಫಲವಾಗಿ ಆ ಯುವಕರನ್ನು ಗುರಿ ಮಾಡುತ್ತಿದ್ದಾರೋ ಅವರು ನಿಜ ಅರ್ಥದಲ್ಲಿ ಅಪರಾಧಿಯಾಗಿದ್ದಾರೆಯೇ ಹೊರತು ಅದಕ್ಕೆ ಗುರಿಯಾದವರಲ್ಲ. ಅವರಲ್ಲಿ ಎಷ್ಟೋ ಜನರು ಮುಗ್ಧರಾಗಿರುತ್ತಾರೆ. ನಾಮಧಾರಿ ಮೌಲ್ವಿಗಳು ಅವರನ್ನು ತಪ್ಪು ದಾರಿಯ ಮೇಲೆ ನಡೆಸುತ್ತಿದ್ದಾರೆ.

* ಮಹಿಳೆಯು ಪ್ರಶ್ನೆ ಕೇಳಿದರು. ಇಂತಹ ಸಂದರ್ಭದಲ್ಲಿ ಅಹ್ಮದಿಯ ಜಮಾಅತಿನ ಕಾರ್ಯ ಸಾಧನೆಯೇನು?

ಆಗ ಹುಝೂರ್ ಹೇಳಿದರು. ನಾವು ನಮ್ಮ ಸಾಧ್ಯತೆಯಲ್ಲಿರುವ ಎಲ್ಲವೂ ಮಾಡುತ್ತೇವೆ. ಒಂದು ಸಾಮಾನ್ಯ ರೀತಿಯಲ್ಲಿ ನಾವು ಏನು ಮಾಡಬಹುದು? ಈ ಪೈಕಿ ನಾವು ಪ್ರೀತಿ, ಸ್ನೇಹ, ಹಾಗೂ ಸಹೋದರತೆಯಿಂದ ಪ್ರಚಾರ ಮಾಡುತ್ತೇವೆ. ಇದುವೇ ಇಸ್ಲಾಮಿನ ಯಥಾರ್ಥ ಶಿಕ್ಷಣವಾಗಿದೆ. ಜನರಿಗೆ ಹೇಳುತ್ತೇವೆ. ಉಗ್ರವಾದದ ಬದಲಿಗೆ ಇಸ್ಲಾಮಿನ ಯಥಾರ್ಥ ಶಿಕ್ಷಣವನ್ನು ಅನುಸರಿಸಬೇಕು. ಎರಡನೆಯದಾಗಿ ನಮ್ಮ ಯುವ ಪೀಳಿಗೆ ಅಂದರೆ ಅಹ್ಮದಿಯ ಯುವಕರನ್ನು ನನ್ನ ಅಭಿಪ್ರಾಯದಲ್ಲಿ ಎಂದೂ ನೀವು ಆ ಜನರಿಗೆ ಗುರಿಯಾಗುವುದನ್ನು ನೋಡಲಾರಿರಿ. ಅಥವಾ ಆ ಮೌಲ್ವಿಗಳ ಕಾರಣದಿಂದ ಉಗ್ರವಾದಕ್ಕೆ ತುತ್ತಾಗಿದ್ದು ಕಾಣಲಾರಿರಿ. ಅದೇ ಮಹಿಳೆ ಪ್ರಶ್ನೆ ಕೇಳಿದರು. ಅಹ್ಮದಿ ಯುವಕರಿಗಲ್ಲದೇ ತಾವು ಇತರರಿಗೆ ಏನು ಮಾಡಬಲ್ಲಿರಿ?

ಆಗ ಹುಝೂರ್ ಹೇಳಿದರು. "ನೋಡಿ ನಾವು ಕೇವಲ ತಬ್ಲೀಗ್ ಮಾಡಬಹುದು. ನಾವು ನಮ್ಮ ಸಂಸ್ಥೆಗಳನ್ನು ಹೊಂದಿದ್ದೇವೆ. ನಮ್ಮ ಜಮಾಅತಿನ ಕೆಲಸ ಪ್ರಚಾರ ಮಾಡುವುದು ಆಗಿರುತ್ತದೆ. ಅದು ನಾವು ಮಾಡುತ್ತಿದ್ದೇವೆ.

* ಅನಂತರ ಕ್ರೊವೇಷಿಯನ್ ಮಹಿಳೆ ಪ್ರಶ್ನೆ ಕೇಳಿದರು. ಕೇವಲ ಪ್ರಚಾರ ಸಾಕಾಗುವುದಿಲ್ಲವಲ್ಲ. ತಾವು ಓರ್ವ ಆಧ್ಯಾತ್ಮಿಕ ಮಾರ್ಗದರ್ಶಕರಾದ ನೆಲೆಯಲ್ಲಿ ಏನು ಮಾಡಬಹುದು?

ಆಗ ಹುಝೂರ್ ಹೇಳಿದರು. ಪ್ರಚಾರ ಮಾಡುವ ಜೊತೆ ಜೊತೆಯಲ್ಲಿ ನಾವು ಇತರ ಕಾರ್ಯಯೋಜನೆಗಳನ್ನು ಉಪಯೋಗಿಸುತ್ತೇವೆ. ನನಗೆ ಯಾವುದೇ ಸಂಸದ್ ಸಭೆಯಲ್ಲಿ ಹೇಳುವ ಸಂದರ್ಭ ಒದಗಿ ಬಂದಾಗ ಅಥವಾ ವಿದ್ಯಾವಂತರು ಒಟ್ಟುಗೂಡಿದ ಪಕ್ಷದಲ್ಲಿ, ನಾನು ಯಾವಾಗಲೂ ಹೇಳುತ್ತಿರುತ್ತೇನೆ. ಇಸ್ಲಾಮಿನ ಯಥಾರ್ಥ ಶಿಕ್ಷಣದಿಂದ ಅವಗತರನ್ನಾಗಿ ಮಾಡುವ ಪ್ರಯತ್ನ ಮಾಡುತ್ತೇನೆ. ಸಾಮಾನ್ಯ ಮುಸ್ಲಿಮರಿಗೆ ಅಥವಾ ವಿಶೇಷವಾಗಿ ಯುವ ಪೀಳಿಗೆಗೆ ಹೇಳುತ್ತೇನೆ, ನೀವು ಮಾಡುತ್ತಿದ್ದದ್ದೆಲ್ಲ ಇಸ್ಲಾಮಿನ ನಿಜವಾದ ಶಿಕ್ಷಣಕ್ಕೆ ಅನುಗುಣವಾಗಿಲ್ಲ. ಹೀಗೆ ತನಗೆ ಲಭ್ಯವಿರುವ ಮಾಧ್ಯಮಗಳಿಂದ ಏನೆಲ್ಲ ಮಾಡಬಹುದೋ ಮಾಡುತ್ತಿದ್ದೇನೆ.

* ಆ ಮಹಿಳೆ ಪತ್ರಕರ್ತೆ ಪ್ರಶ್ನೆ ಕೇಳಿದರು. ಭವಿಷ್ಯದಲ್ಲಿ ಅಹ್ಮದಿಯಾ ಜಮಾಅತ್ ಹೆಚ್ಚು ಪ್ರಗತಿ ಹೊಂದುವುದು ಜನರು ಅದರಿಂದ ಪ್ರಭಾವಿತರಾಗುವರು ಎಂಬುದಾಗಿ ನೀವು ಭಾವಿಸುವಿರಾ? ಆಗ ಹುಝೂರ್ ಹೇಳಿದರು. ನಾನು ಯಾವಾಗಲೂ ಆಶಾವಾದಿಯಾಗಿದ್ದೇನೆ.

* ಮಹಿಳಾ ಪತ್ರಕರ್ತೆ ಪ್ರಶ್ನಿಸಿದರು. ಹೀಗೆ ಕಾಲ ಮುಂದುವರೆಯುತ್ತಾ ಇದೆ ಅದಕ್ಕೆ ತಕ್ಕಂತೆ ಧರ್ಮದಲ್ಲಿಯೂ ಬದಲಾವಣೆ ಆಗುವುದೇ? ಧರ್ಮವು ಜನರ ಕಾರಣದಿಂದಾಗಿ ಬದಲಾವಣೆ ಹೊಂದಬೇಕು ಅಥವಾ ಜನರಿಗಾಗಿ ಧರ್ಮಕಾರಣಗಳಿಂದಾಗಿ ಬದಲಾಗುವ ಅವಶ್ಯಕತೆ ಇದೆ? ಈ ಪೈಕಿ ನಿಮ್ಮ ಅಭಿಪ್ರಾಯವೇನು?

ಆಗ ಹುಝೂರ್ ಹೇಳಿದರು. ಅದೇ ಮಾತನ್ನು ನಾನು ಕುತುಬ ಜುಮಾದಲ್ಲಿ ವಿವರಿಸಿದ್ದೆ. ಅದೇನೆಂದೆ ಧರ್ಮವು ಜನರಿಗೆ ಮಾರ್ಗದರ್ಶಕವಾಗಿದೆ. ಜನರು ಧರ್ಮಕ್ಕೆ ಮಾರ್ಗದರ್ಶನ ಮಾಡಲು ಹೊರಟರೆ ಯಾವ ಧರ್ಮದ ಅವಶ್ಯಕತೆಯೇ ಇರಲಿಕ್ಕಿಲ್ಲ. ಇತ್ತೀಚೆಗೆ ಬಂದಿರುವ ವಿವಿಧ ಪಕ್ಷಗಳು ಉದಾಹರಣೆಗೆ Socialist party, SDP, Green party ಇನ್ನಿತರರ ಪಕ್ಷಗಳು ಮತ್ತು ಪ್ರತಿಯೊಂದು ಪಕ್ಷವು ತನ್ನ ಪ್ರನಾಳಿಕೆಯಂತೆ ಧರ್ಮವನ್ನು ಮಾರ್ಪಾಟು ಮಾಡಬಹುದು.

ಹುಝೂರೆ ಅನ್ವರ್(ಅಬಅ) ಹೇಳಿದರು. ಅಂದಹಾಗೆ ಅಹ್ಮದಿಯಾ ಜಮಾಅತಿನ ಪ್ರಣಾಳಿಕೆಯು ಪವಿತ್ರ ಖುರ್‌ಆನ್ ಆಗಿದೆ. ನಮಗಾಗಿ ಅದೇ ಮಾರ್ಗದರ್ಶಕ ತತ್ವಗಳಾಗಿವೆ. ಅದರ ಮೇಲೆಯೇ ನಮಗೆ ದೃಢವಾದ ನಂಬಿಕೆಯಿದೆ. ಈ ಪವಿತ್ರ ಗ್ರಂಥವು ಎಲ್ಲ ಮಾನವರಿಗೆ ಮಾರ್ಗದರ್ಶಕವಾಗಿದೆ. ನಮ್ಮ ದೃಢವಾದ ವಿಶ್ವಾಸವಿದೆ. ಪವಿತ್ರ ಖುರ್‌ಆನ್ ಅವತರಣೆಗೊಂಡು 1500 ವರ್ಷ ಕಳೆದರೂ ಇಂದಿಗೂ ಸುರಕ್ಷಿತವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಒಂದು ವಚನವಿದೆ. ಅದು ಸೂಚಿಸುವುದೆನೆಂದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನ ಶಿಕ್ಷಣವನ್ನು ಮತ್ತು ವಚನಗಳನ್ನು

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.